ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 42 ಅಕ್ಟೋಬರ್ 24, 1982 ಬೆಲೆ 60 ಪೈಸೆ

ಗೊಂದಲದಲ್ಲಿ ಕಾಂಗ್ರೆ

ಪಕ್ಷದೊಳಗಿನ ಗುಂಪುಗಾರಿಕೆ ಮತ್ತು ಭಿನ್ನಮತೀಯರ ಚಟುವಟಿಕೆ, ದಕ್ಷಿಣದ ಎರಡು ರಾಜ್ಯಗಳಲ್ಲೂ ಉತ್ತರ ಪೂರ್ವ ಭಾಗದ ಮೂರು ರಾಜ್ಯಗಳಲ್ಲಿ ನಡೆಯಬೇಕಾಗಿರುವ ಚುನಾವಣೆಗಳ ಬಗ್ಗೆ ಅನುಸರಿಸಬೇಕಾದ ತಂತ್ರ ಮತ್ತು ಸೂತ್ರಗಳು, ಹಲವಾರು ವರ್ಷಗಳಿಂದ ನಡೆಸದಿರುವ ಸಂಘಟನಾ ಚುನಾವಣೆಗಳು — ಇವೇ ಮೊದಲಾದ ಮುಖ್ಯ ಪ್ರಶ್ನೆಗಳನ್ನು ಚರ್ಚಿಸಲು ಕಾಂಗ್ರೆ ವರ್ಕಿಂಗ್ ಕಮಿಟಿ ಸಭೆಯು ಇತ್ತೀಚೆಗೆ ನವದೆಹಲಿಯಲ್ಲಿ ಸೇರಿತ್ತು. ಆದರೆ ಇದಾವುದರ ಬಗ್ಗೆಯೂ ಒಂದು ಸ್ಪಷ್ಟ ನಿರ್ಣಯ ಮಾಡಲಾಗಲಿಲ್ಲ ಮತ್ತು ಕಚ್ಚಾಡುತ್ತಿರುವ ತನ್ನ ಸದಸ್ಯರಿಗೆ ಒಂದು ನಿರ್ದೇಶನವನ್ನು ಕೊಡುವುದು ಕಾಂಗ್ರೆ ಮುಖಂಡತ್ವಕ್ಕೆ, ಅಂದರೆ ಎಲ್ಲವನ್ನು ತಾನೇ ನಿರ್ಧರಿಸುವ ಇಂದಿರಾ ಗಾಂಧಿಯವರಿಗೆ ಸಾಧ್ಯವಾಗಲಿಲ್ಲ.

ಹದಗೆಡುತ್ತಿರುವ ಕಾಂಗ್ರೆ ಸಂಘಟನೆಯೊಳಗಿನ ಪರಿಸ್ಥಿತಿಯನ್ನು ಹತೋಟಿಗೆ ತರುವುದು ಇಂದಿರಾ ಗಾಂಧಿಯವರಿಗೂ ಸಾಧ್ಯವಾಗದ ಪರಿಸ್ಥಿತಿ ಉಂಟಾಗಿದೆ. ಆಂಧ್ರ ಪ್ರದೇಶದಲ್ಲಿನ ಇತ್ತೀಚಿಗಿನ ಬೆಳವಣಿಗೆಗಳಂತೂ ಇದಕ್ಕೆ ಉತ್ತಮ ನಿದರ್ಶನ. ವ್ಯಕ್ತಿ ಆಧಾರಿತವಾಗಿದ್ದು, ಎಲ್ಲಾ ಆಂತರಿಕ ಪ್ರಜಾಪ್ರಭುತ್ವ ಕ್ರಮಗಳನ್ನು ಗಾಳಿಗೆ ತೂರಿ, ಅಧಿಕಾರ ಮತ್ತು ಲಾಭಕ್ಕಾಗಿ ಸೇರಿಕೊಂಡಿರುವ ತಮ್ಮ ವ್ಯಕ್ತಿತ್ವವೇ ಇಲ್ಲದ ಜನರಿಂದ ತುಂಬಿರುವ ಕಾಂಗ್ರೆಯಲ್ಲಿ

ಸಂಪಾದಕೀಯ

ಗೊಂದಲಮಯವಾದ ಪರಿಸ್ಥಿತಿ ಉಂಟಾಗಿರುವುದು ಆಶ್ಚರ್ಯವೇನಿಲ್ಲ. ಮಂತ್ರಿಗಳಿಂದ ಮೊದಲ್ಗೊಂಡು ಶಾಸಕರ ತನಕ ಎಲ್ಲರೂ ಇಂದಿರಾ ಗಾಂಧಿಯವರಿಂದಲೇ ಆಯ್ಕೆಯಾಗಿ, ಅವರ ವೈಯಕ್ತಿಕ ಪ್ರಭಾವದಿಂದಲೇ ಚುನಾವಣೆಗಳಲ್ಲಿ ಗೆಲ್ಲುವುದರಿಂದ ಈ ಜನರಿಗೆ ಜನತೆಯ ಸೇವೆ ಮಾಡುವುದರ ಮೂಲಕ ಜನ ಬೆಂಬಲ ಪಡೆಯುವ ಯೋಚನೆಯೇ ಇಲ್ಲ. ಈಗೀಗ ಕಾಂಗ್ರೆಯ ಪ್ರಭಾವವೂ, ಇಂದಿರಾ ಗಾಂಧಿಯವರ ವೈಯಕ್ತಿಕ ಪ್ರಭಾವವೂ ಕಡಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಧಿಕಾರ ಮತ್ತು ಲಾಭಕ್ಕಾಗಿ ಅಂಟಿಕೊಂಡಿರುವ ಹಲವರು ಕಾಂಗ್ರೆಯಿಂದ ದೂರ ಸರಿಯುವ ಲಕ್ಷಣಗಳೂ ಕಾಣಿಸುತ್ತಿವೆ. ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಲ್ಲಿ ವಿಧಾನ ಸಭೆ ಚುನಾವಣೆ ಸಮೀಪಿಸುತ್ತಿರುವಂತೆಯೇ ಇನ್ನೆಷ್ಟೋ ಮಂದಿ ಕಾಂಗ್ರೆ ಬಿಟ್ಟು ಹೊರ ಬಂದರೆ ಆಶ್ಚರ್ಯವಿಲ್ಲ!

ಈ ಪರಿಸ್ಥಿತಿಯಲ್ಲಿ ಕಾಂಗ್ರೆ ವಿರೋಧಿ ಮತಗಳು ವಿಭಜನೆಯಾಗದಂತೆ ಮಾಡಿ, ಕಾಂಗ್ರೆಯನ್ನು ಒಗ್ಗಟ್ಟಾಗಿ ಎದುರಿಸಿ ಸೋಲಿಸಲು ಪ್ರಯತ್ನ ಮಾಡುವ ದಿಸೆಯಲ್ಲಿ ವಿರೋಧ ಪಕ್ಷಗಳು ಯೋಚಿಸುತ್ತಿರುವುದು ಉತ್ತಮ ಲಕ್ಷಣ. ವಿರೋಧ ಪಕ್ಷಗಳು, ತಮ್ಮ ತಮ್ಮ ಧೋರಣೆಗಳಿಗೆ ಚ್ಯುತಿಬಾರದ ರೀತಿಯಲ್ಲಿ ಚುನಾವಣೆಯಲ್ಲಿ ಒಂದಾಗಿ ಅಥವಾ ಹೊಂದಾಣಿಕೆ ಮಾಡಿ ಹೋರಾಡುವ ದಿಸೆಯಲ್ಲಿ ಸ್ಪಷ್ಟವಾಗಿ ಮುಂದುವರಿದದ್ದೇ ಆದರೆ ಪರಿಸ್ಥಿತಿಯ ಪ್ರಯೋಜನ ಪಡೆಯುವುದು ಸಾಧ್ಯ.

ಕಾಂ| ಆರೋಕ್ಯದಾಸ್‌ರ ಕೊಲೆಯನ್ನು ಖಂಡಿಸಿ

ಬಹಿರಂಗ ಸಭೆ, ಮತಪ್ರದರ್ಶನ

ಕೆ. ಜಿ. ಎಫ್. ನಲ್ಲಿ ಸೆಪ್ಟೆಂಬರ್ 30 ರಂದು ರಿಪಬ್ಲಿಕನ್ ಪಕ್ಷದ ಶಾಸಕ ಆರ್ಮುಗಂನ ಗೂಂಡಾಗಳು ಚಿನ್ನದ ಗಣಿ ಕಾರ್ಮಿಕ ಸಂಘದ ಕಾರ್ಯಕರ್ತ ಕಾಂ| ಆರೋಕ್ಯದಾಸ್ ಅವರನ್ನು ಕೊಲೆ ಮಾಡಿರುವುದನ್ನು ಖಂಡಿಸಿ, ಕೊಲೆ ಪಾತಕಿಗಳನ್ನು ಶಿಕ್ಷಿಸುವಂತೆ ಒತ್ತಾಯಿಸಿ ಅಕ್ಟೋಬರ್ 18 ರಂದು ರಾಜ್ಯದಾದ್ಯಂತ ಮತಪ್ರದರ್ಶನ, ಬಹಿರಂಗ ಸಭೆಗಳು ನಡೆದಿರುವುದಾಗಿ ವರದಿಯಾಗಿದೆ.

ಬೆಂಗಳೂರು :

ದಿನಾಂಕ 18 ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಮತ್ತು ಸಿ. ಐ. ಟಿ. ಯು. ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಕೊಲೆಗಡುಕರನ್ನು ಶಿಕ್ಷಿಸುವಂತೆ ಒತ್ತಾಯಿಸಿ ಭಾರಿ ಮೆರವಣಿಗೆ ನಡೆಯಿತು. ನೂರಾರು ಸಂಖ್ಯೆಯಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿ ಯುವಜನರು ಪಾಲ್ಗೊಂಡಿದ್ದ ಈ ಮೆರವಣಿಗೆ ನಗರದ ಮೈಸೂರು ಬ್ಯಾಂಕ್ ವೃತ್ತದಿಂದ ಆರಂಭವಾಯಿತು. ಅಲ್ಲಿಂದ ಡೈರೆಕ್ಟರ್ ಜನರಲ್ ಆಫ್ ಪೋಲಿಸ್ ಇವರ ಕಚೇರಿಗೆ ತೆರಳಿ ಅವರಿಗೆ ಈ ಕುರಿತು ಒತ್ತಾಯಿಸುವ ಮನವಿ ಸಲ್ಲಿಸಲಾಯಿತು. ಸೆಪ್ಟೆಂಬರ್ 26 ರಂದು ಸಂಘದ ಕಚೇರಿಯೂ ಹಲ್ಲೆಗೀಡಾದುದನ್ನು ಇಲ್ಲಿ ಸ್ಮರಿಸಬಹುದು.

ಸಂಘದ ಮುಖಂಡರಿಗೆ ಮತ್ತು ಸಂಘದ ಕಚೇರಿಯ ರಕ್ಷಣೆಯ ಬಗ್ಗೆ ಮೊದಲೇ ಪೋಲಿಸರಿಗೆ ಸೂಚನೆ ನೀಡಿದ್ದರೂ, ಪೋಲಿಸರು ಪಕ್ಷಪಾತತನದಿಂದ ವರ್ತಿಸಿ ಗೂಂಡಾಗಳಿಗೆ ಕುಮ್ಮಕ್ಕು ಕೊಡುತ್ತಿದ್ದಾರೆಂದು ಮನವಿಯಲ್ಲಿ ತಿಳಿಸಲಾಗಿತ್ತು.

ನಂತರ ಕಬ್ಬನ್ ಪಾರ್ಕಿನಲ್ಲಿ ಬಹಿರಂಗ ಸಭೆ ನಡೆದು ಸಭೆಯನ್ನುದ್ದೇಶಿಸಿ ಕಾಂ| ಎಸ್. ಸೂರ್ಯನಾರಾಯಣರಾವ್, ಪಿ. ಸುಬ್ರಮಣಿ, ಆರ್. ಶ್ರೀನಿವಾಸ ಇವರುಗಳು ಮಾತನಾಡಿ ಪೋಲೀಸರ ವರ್ತನೆಯನ್ನು ಖಂಡಿಸಿದರು.

ಮಂಗಳೂರು :

ಕಾಂ| ಆರೋಕ್ಯದಾಸ್ ಅವರ ಕೊಲೆಯನ್ನು ಖಂಡಿಸಿ, ಕೊಲೆಪಾತಕಿಗಳನ್ನು ಶಿಕ್ಷಿಸಬೇಕೆಂದು ಒತ್ತಾಯಿಸಿ ರಾಜ್ಯ ಸಿ. ಐ. ಟಿ. ಯು. ಕರೆಯ ಮೇರೆಗೆ 18-10-82 ರಂದು ಮಂಗಳೂರಿನಲ್ಲಿ ಭಾರೀ ಪ್ರತಿಭಟನಾ ಮೆರವಣಿಗೆ ನಡೆದು, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ನಂತರ ನಗರದ ನೆಹರೂ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಸಲಾಯಿತು. ಅಧ್ಯಕ್ಷತೆ

(8ನೇ ಪುಟ ನೋಡಿ)

ಕಲಕತ್ತೆಯಲ್ಲಿ ಬಿ. ಇ. ಎಫ್. ಐ. ಸ್ಥಾಪನಾ ಸಮ್ಮೇಳನ

ಪರಿಷ್ಕರಣವಾದದತ್ತ ಸಾಗುತ್ತಿದ್ದ ಭಾರತದ ಬ್ಯಾಂಕ್ ನೌಕರರ ಚಳುವಳಿಯನ್ನು ಸರಿಯಾದ ದಿಕ್ಕಿಗೆ ಕೊಂಡೊಯ್ಯುವಲ್ಲಿ ಅನುವಾಗುವಂತೆ ಬ್ಯಾಂಕ್ ನೌಕರರ ಸಮರಶೀಲ ಸಂಘಟನೆ ಇದೀಗ ಜನ್ಮ ತಾಳಿದೆ.

ಅಕ್ಟೋಬರ್ 13 ರಿಂದ 15 ರವರೆಗೆ ಕಲ್ಕತ್ತದಲ್ಲಿ ನಡೆದ ಪ್ರಥಮ ಸಮ್ಮೇಳನದಲ್ಲಿ ಸುಮಾರು 75,000 ಬ್ಯಾಂಕ್ ನೌಕರರನ್ನು ಪ್ರತಿನಿಧಿಸುವ 300 ಪ್ರತಿನಿಧಿಗಳು ಹಾಗೂ 211 ವೀಕ್ಷಕರು ಆಣಿನೆರೆದು ಹೊಸ ಅಖಿಲ ಭಾರತ ಸಂಘಟನೆಯೊಂದಕ್ಕೆ ಚಾಲನೆ ನೀಡಿದರು. ಹೋರಾಟದ ಮಹಾನ್ ಪರಂಪರೆ ಇರುವ ಕಲ್ಕತ್ತದಲ್ಲಿ "ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ ಆಫ್ ಇಂಡಿಯಾ" (BEFI) ಜನ್ಮ ತಾಳಿತು.

ಕಲ್ಕತ್ತದ ಸುಭೋದ್ ಮಲ್ಲಿಕ್ ಚೌಕದಲ್ಲಿ ನಡೆದ ಉದ್ಘಾಟನಾ ಬಹಿರಂಗ ಸಭೆಗೆ ನಗರದ ನಾನಾ ಮೂಲೆಗಳಿಂದ ಸುಮಾರು 20,000 ಬ್ಯಾಂಕ್ ನೌಕರರು ಮೆರವಣಿಗೆ ಮೂಲಕ ಆಗಮಿಸಿದ್ದರು. ಖ್ಯಾತ ಅರ್ಥ ಶಾಸ್ತ್ರಜ್ಞ, ಪ. ಬಂಗಾಲ ಸರಕಾರದ ಮಾಜಿ ಹಣಕಾಸು ಮಂತ್ರಿ ಕಾಂ| ಅಶೋಕ ಮಿತ್ರ ಅವರು ಸ್ವಾಗತ ಸಮಿತಿಯ ಪರವಾಗಿ ಪ್ರತಿನಿಧಿಗಳಿಗೆ, ವೀಕ್ಷಕರಿಗೆ ಆತ್ಮೀಯ ಸ್ವಾಗತ ಕೋರಿದರು.

ಪ್ರತಿನಿಧಿ ಸಮಾವೇಶವನ್ನುದ್ದೇಶಿಸಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ, ಅಖಿಲ ಭಾರತ ಜ್ಯೂಟ್ ಕಾರ್ಮಿಕರ ಫೆಡರೇಷನ್‌ನ ಅಧ್ಯಕ್ಷೆ ಕಾಂ| ಕ್ಯಾಪ್ಟನ್ ಲಕ್ಷ್ಮಿ ಸೈಗಾಲ್, ಪ. ಬಂಗಾಲದ ಹಣಕಾಸುಮಂತ್ರಿ ಕಾಂ| ಶಾಂತಿ ಘಟಕ್, ಮಧ್ಯಮ ವರ್ಗದ ನೌಕರರ ವಿವಿಧ ಸಂಘಟನೆಗಳ ನಾಯಕರು, ಬ್ಯಾಂಕ್ ಅಧಿಕಾರಿಗಳ ಸಂಘಟನೆಯ (AICBO) ಮುಖಂಡರು ಮಾತನಾಡಿ ಸಮ್ಮೇಳನಕ್ಕೆ ಶುಭ ಕೋರಿದರು. ಮಾರನೇ ದಿನ ಪ. ಬಂಗಾಲದ ಮುಖ್ಯ ಮಂತ್ರಿ ಕಾಂ| ಜ್ಯೋತಿಬಸು ಅವರು ಸಮ್ಮೇಳನಕ್ಕೆ ಆಗಮಿಸಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ಸಂಘಟಿತ ನೌಕರರ ಮೇಲೆ ಕೆಂಡ ಕಾರುತ್ತಿರುವ ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ಧೋರಣೆಯ ವಿರುದ್ಧ ಅವಿರತ ಹೋರಾಟ ನಡೆಸಲು ಕಾಂ| ಜ್ಯೋತಿಬಸು ಕರೆ ನೀಡಿದರು.

ಸಮ್ಮೇಳನವು ಬ್ಯಾಂಕ್ ನೌಕರರ ಸಮಸ್ಯೆಗಳ ಕುರಿತು ಸುಧೀರ್ಘ ಚರ್ಚೆ ನಡೆಸಿತು. ಸಿದ್ಧತಾ ಸಮಿತಿ (Prepartory Committee) ಯ ಪರವಾಗಿ ಕಾಂ| ನರೇಶ್ ಪಾಲ್ ಸುಧೀರ್ಘ ವರದಿ ಸಲ್ಲಿಸಿದರು. ಗಣಕ ಯಂತ್ರದ ಪರಿಣಾಮ, ಯಾಂತ್ರೀಕರಣ, ವರ್ಗಾವಣೆ, ಏಕಪಕ್ಷೀಯ ನಡವಳಿಕೆ, ಗ್ರಾಹಕ ಸೇವೆಯ ನೆಪದಲ್ಲಿ ಬ್ಯಾಂಕ್ ನೌಕರರ ಮೇಲೆ ನಡೆಯುತ್ತಿರುವ ದಿನ ನಿತ್ಯದ ಅಪಪ್ರಚಾರ, ಒಟ್ಟಾರೆ ಕಾರ್ಮಿಕ ಸಮಸ್ಯೆಗಳು, ಕಾರ್ಮಿಕ ಕ್ಷೇತ್ರದ ಅವಿಭಾಜ್ಯ ಅಂಗವಾಗಿ ಬ್ಯಾಂಕ್ ನೌಕರರ ಸಂಘಟನೆಯನ್ನು ಕಟ್ಟುವುದು—ಇವೇ ಮೊದಲಾದ ವಿಷಯಗಳ ಬಗ್ಗೆ ಸಮ್ಮೇಳನ ಚರ್ಚಿಸಿತು.

1965-66 ರಿಂದ ಆಡಳಿತ ವರ್ಗದೊಂದಿಗೆ ಶಾಮೀಲಾಗಿ ಕಾರ್ಮಿಕ ವಿರೋಧಿ ನೀತಿಗಳನ್ನು ಬೆಂಬಲಿಸುತ್ತಾ, ತುರ್ತು ಪರಿಸ್ಥಿತಿಯಲ್ಲಿ ಸರಕಾರದ ಜೊತೆ ಸೇರಿ, ಪ್ರಜಾಪ್ರಭುತ್ವ ರೀತಿಯಲ್ಲಿ ಸಂಘವನ್ನು ನಡೆಸದೇ, ಪ್ರಜಾಪ್ರಭುತ್ವವಾದಿಗಳನ್ನು ಬಗ್ಗು ಬಡೆಯುವಲ್ಲಿ ನಡೆಸಿದ ಹೀನ ಒಳಸಂಚುಗಳು ಹಾಗೂ ಈ ನಡುವೆ ಗಣಕ ಯಂತ್ರಗಳನ್ನು ಉಪಯೋಗಿಸುವ ಆಡಳಿತ ವರ್ಗದ ಉದ್ದೇಶಕ್ಕೆ ಕುಮ್ಮಕ್ಕು ಕೊಟ್ಟು, ಒಟ್ಟಾರೆ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತ ಬಂದಿರುವ ಬ್ಯಾಂಕ್ ನೌಕರರ ಸಂಘಟನೆಗೆ ಬದಲಿಯಾಗಿ ಈ ಹೊಸ ಸಂಘಟನೆಯು ಆರಂಭವಾಗಿದೆ.

ನೌಕರರ ಬೇಡಿಕೆಗಳ ಕುರಿತು ಚಾರ್ಟರ್ ಆಪ್ ಡಿಮಾಂಡ್ಸ್ ಸಲ್ಲಿಸುವ ಸಂದರ್ಭದಲ್ಲಿ, ಸರ್ವಸದಸ್ಯರ ಒಪ್ಪಿಗೆ ಪಡೆಯದೇ, ಮಾತುಕತೆಗಳ ವಿವರವನ್ನು ಸದಸ್ಯರಿಗೆ ತಿಳಿಸುವ ಗೊಡವೆಗೇ AIBEA ಮೊದಲಾದ ಸಂಘಟನೆಗಳು ಹೋಗಿರಲಿಲ್ಲ. ಬಿ. ಇ. ಎಫ್. ಐ. ಈ ಅನಿಷ್ಟ ಪರಂಪರೆಯನ್ನು ತೊಡೆದು ಹಾಕಿ ಸರ್ವಸದಸ್ಯರ ಸಮ್ಮತಿ ಪಡೆದ ನಂತರವೇ ಚಾರ್ಟರ್ ಆಪ್ ಡಿಮಾಂಡ್ಸ್ ಸಲ್ಲಿಸುವ ನಿರ್ಧಾರವನ್ನು ಕೈಗೊಂಡಿತು. ಸಂಘಟನೆಯು ಹಲ್ಲು

(8ನೇ ಪುಟ ನೋಡಿ)

ರೈತ ಸಂಘದ ಚಟುವಟಿಕೆಗಳು

ಹರಪನಹಳ್ಳಿ :

ರೈತ ಸಂಘದ ಬಳ್ಳಾರಿ ಜಿಲ್ಲಾ ಪ್ರಾದೇಶಿಕ ಸಮಿತಿಯು ನೇತೃತ್ವದಲ್ಲಿ ಚಟುವಟಿಕೆಗಳು ಬಿರುಸಾಗಿ ನಡೆಯುತ್ತಿವೆ. ಅನೇಕ ಕಡೆ ರೈತ ಸಂಘದ ಗ್ರಾಮ ಘಟಕಗಳನ್ನು ಪ್ರಾರಂಭಿಸಲಾಗುತ್ತಿದೆ.

ಹರಪನಹಳ್ಳಿ ತಾಲ್ಲೂಕಿನ ಕೂಲಿಹಳ್ಳಿ (7-10-82 ರಂದು) ಮತ್ತು ಕಾನಹಳ್ಳಿ (10-10-82 ರಂದು) ಗ್ರಾಮಗಳಲ್ಲಿ ನೂತನ ಗ್ರಾಮಘಟಕಗಳನ್ನು ಆರಂಭಿಸಲಾಗಿದೆ. ಕೂಲಿಹಳ್ಳಿ ಗ್ರಾಮ ಘಟಕದ ಪದಾಧಿಕಾರಿಗಳು ಇಂತಿದ್ದಾರೆ : ಅಧ್ಯಕ್ಷರಾಗಿ ಜಾರ್ಜಪ್ಪ, ಉಪಾಧ್ಯಕ್ಷರಾಗಿ ಕೋಳಿ ಕೆಂಚಪ್ಪ, ಕಾರ್ಯದರ್ಶಿಯಾಗಿ ಬಸವರಾಜ್, ಉಪ ಕಾರ್ಯದರ್ಶಿಯಾಗಿ ವಿಶ್ವನಾಥಸ್ವಾಮಿ ಮತ್ತು 16 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

ಕಾನಹಳ್ಳಿ ಘಟಕದ ಪದಾಧಿಕಾರಿಗಳು ಇಂತಿದ್ದಾರೆ : ಅಧ್ಯಕ್ಷರಾಗಿ ವೀರಣ್ಣ, ಉಪಾಧ್ಯಕ್ಷರಾಗಿ ಮಂಜುನಾಥ, ಕಾರ್ಯದರ್ಶಿಯಾಗಿ ಬದರಿನಾರಾಯಣಾಚಾರ್, ಸಂಚಾಲಕರಾಗಿ ಪಿ. ರುದ್ರಪ್ಪ. ಹಾಗೂ 16 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಗಿದೆ.

ಮೇಲ್ಕಂಡ ಎರಡೂ ಗ್ರಾಮಗಳಲ್ಲಿ ನಡೆದ ಸಭೆಯನ್ನುದ್ದೇಶಿಸಿ ಜಿಲ್ಲಾ ಪ್ರಾದೇಶಿಕ ಸಮಿತಿಯ ಸಂಚಾಲಕ ಕಾಂ| ಪಿ. ಆರ್. ವೆಂಕಟೇಶ್ ಮತ್ತು ಕಾಂ| ಪರಶುರಾಮ್ ಮಾತನಾಡಿದರು.

30-9-82 ರಂದು ಹರಪನಹಳ್ಳಿ ತಾಲ್ಲೂಕಿನ ಶೃಂಗಾರತೋಟ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿ (ವಿಲೇಜ್ ಅಕೌಂಟೆಂಟ್)ಯ ಭ್ರಷ್ಟಾಚಾರದ ಬಗ್ಗೆ ರೈತ ಸಂಘದ ಆಶ್ರಯದಲ್ಲಿ ಮತಪ್ರದರ್ಶನ ನಡೆಸಲಾಯಿತು. ದಾಖಲೆ ಕೊಡುವಾಗ 25 ರೂ. ಯಂತೆ ಲಂಚ ಪಡೆಯುತ್ತಿರುವ ಗ್ರಾಮ ಲೆಕ್ಕಾಧಿಕಾರಿಯ ಕ್ರಮವನ್ನು ಖಂಡಿಸಲಾಯಿತು. ಉದ್ರಿಕ್ತ ರೈತರು ಆ ಮಹಾಶಯನನ್ನು ಕೆಲ ಸಮಯ ಘೇರಾವೋ ಮಾಡಿದ್ದರು. ನೇತೃತ್ವವನ್ನು ಕಾಂ| ಪರಶುರಾಮ್ ವಹಿಸಿದ್ದರು.

ಬೆಂಗಳೂರು :

ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸಮೇತನಹಳ್ಳಿ ಗ್ರಾಮದಲ್ಲಿ 26-9-82 ರಂದು ಗ್ರಾಮ ಘಟಕವೊಂದನ್ನು ಆರಂಭಿಸಲಾಯಿತು. ಕಾಂ| ಆರ್. ಆರ್. ಮನೋಹರ್ ಅಧ್ಯಕ್ಷತೆ ವಹಿಸಿದ್ದರು.

ಪದಾಧಿಕಾರಿಗಳು ಇಂತಿದ್ದಾರೆ : ಅಧ್ಯಕ್ಷರಾಗಿ ನಂಜುಂಡಪ್ಪ, ಉಪಾಧ್ಯಕ್ಷರಾಗಿ ಕೆಂಪಯ್ಯ, ಕಾರ್ಯದರ್ಶಿಯಾಗಿ ನಂದೀಶಪ್ಪ, ಸಹ ಕಾರ್ಯದರ್ಶಿಯಾಗಿ ಹನುಮರೆಡ್ಡಿ, ಖಜಾಂಚಿಯಾಗಿ ಬಿ. ವೆಂಕಟರಮಣಪ್ಪ ಮತ್ತು 8 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು.

5-10-82 ರಂದು ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ಬೆಳವಂಗಲ ಹೋಬಳಿ ರೈತ ಸಂಘದ ಸಭೆಯು ಚಿಕ್ಕಬೆಳವಂಗಲ ಗ್ರಾಮದಲ್ಲಿ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ| ರಂಗಯ್ಯ, ಗಂಗಭೈರಪ್ಪ, ಸಿ. ರಾಮಭದ್ರಯ್ಯ ಮಾತನಾಡಿದರು. ಮುಖ್ಯ ಅತಿಥಿಯಾಗಿ ಕಾಂ| ಪಿ. ಜಗನ್ನಾಥ ಆಗಮಿಸಿದ್ದರು. ಸಭೆಯ ವ್ಯವಸ್ಥೆಯನ್ನು ಚಿಕ್ಕಬೆಳವಂಗಲ ಮಾಜಿ ಚೇರ್‌ಮನ್ ಕಾಂ| ದೊಡ್ಡಯ್ಯ ಹಾಗೂ ನಾರನಹಳ್ಳಿ ವೆಂಕಟರಾಮ್ ಮಾಡಿದ್ದರು.

ರಾಯಚೂರು :

ರಾಯಚೂರು ತಾಲ್ಲೂಕಿನ ರೈತರ ಬೇಡಿಕೆಗಳ ಕುರಿತು ಅನೇಕ ಸಲ ಮನವಿ ಮಾಡಿಕೊಂಡಿದ್ದಾಗ್ಯೂ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. 12-10-82 ರಂದು ಕಾಂ| ಚಂದ್ರಶೇಖರ ಬಾಳೆ, ಬಿ.ಎಸ್. ಪಾಟೀಲ ಹಾಗೂ ಎಚ್.ಎಂ.ನಾಯಕ್ ಇವರ ನೇತೃತ್ವದಲ್ಲಿ ನಿಯೋಗವೊಂದು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನು ಭೇಟಿ ಮಾಡಿ ಮತ್ತೊಮ್ಮೆ ಬೇಡಿಕೆಗಳ ಬಗ್ಗೆ ಗಮನ ಸೆಳೆಯಲಾಯಿತು. ಕೂಡಲೇ ಕ್ರಮಕೈಗೊಳ್ಳದಿದ್ದಲ್ಲಿ ತೀವ್ರ ಚಳವಳಿ ಹೂಡಬೇಕಾದೀತೆಂದು ಎಚ್ಚರಿಸಲಾಗಿದೆ.

10-10-82 ರಂದು ದೇವದುರ್ಗ ತಾಲ್ಲೂಕಿನ ಮಸರಕಲ್ಲ ಗ್ರಾಮದಲ್ಲಿ ರೈತ-ಕೃಷೀ ಕೂಲಿಗಾರರು ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸಿ ಪಂಚಾಯಿತಿ ಚೇರ್‌ಮನ್ ಹಾಗೂ ಟಿ.ಡಿ.ಬಿ. ಅಧ್ಯಕ್ಷರಿಗೆ ಘೆರಾವೋ ಮಾಡಿದರು. ತೀವ್ರ ಬರಗಾಲ ಪೀಡಿತ ಈ ಪ್ರದೇಶದಲ್ಲಿ ಕೃಷಿ ಕಾರ್ಮಿಕರಿಗೆ ಕೆಲಸ ಒದಗಿಸಬೇಕೆಂಬುದು ಮುಖ್ಯ ಬೇಡಿಕೆ. (14-9-82 ರಂದು ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಬೃಹತ್ ಮತಪ್ರದರ್ಶನ ನಡೆದದ್ದನ್ನು ಇಲ್ಲಿ ನೆನೆಯಬಹುದು)

ಸಾಯಂಕಾಲ ರೈತ ಪ್ರತಿನಿಧಿಗಳು ತಾಲ್ಲೂಕು ಕೇಂದ್ರಕ್ಕೆ ತೆರಳಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿ, ಒಂದು ವಾರದೊಳಗಾಗಿ ಕ್ರಮಕೈಗೊಳ್ಳದಿದ್ದಲ್ಲಿ 'ರಾಸ್ತಾ ರೋಖೋ' ಚಳುವಳಿ ಹೂಡಲು ತೀರ್ಮಾನಿಸಿರುವುದಾಗಿ ತಿಳಿಸಲಾಯಿತು.

ರಾಯಚೂರು ತಾಲ್ಲೂಕಿನ ಗಧಾರ ಗ್ರಾಮದಲ್ಲಿ ರೈತ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆ ನಡೆಸಲಾಯಿತು.

ಈ ಗ್ರಾಮದ ಸುತ್ತಲೂ ಹಳ್ಳಗಳು ಹರಿಯುತ್ತಿದ್ದು ಒಂದೇ ಒಂದು ರಸ್ತೆ ಕೂಡ ಇಲ್ಲ. ಕಳೆದ ಇಪ್ಪತ್ತು ವರ್ಷಗಳಿಂದ ಅಧಿಕಾರಿಗಳನ್ನು, ಮಂತ್ರಿ—ಶಾಸಕರನ್ನು ಕರೆದೊಯ್ದು ಸನ್ಮಾನ ಮಾಡಿ, ಈ ಕುರಿತು ವಿನಂತಿಸಿದರೂ ಇದೂವರೆಗೂ ಬೇಡಿಕೆ ಈಡೇರಿರಲಿಲ್ಲ.

6-10-82 ರಂದು ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ| ಬಾಳೆ ಮತ್ತು ಕಾಂ| ಬಿ. ಎಸ್. ಪಾಟೀಲ ಮಾತನಾಡಿ, ಗ್ರಾಮೀಣ ಜನತೆ ತಮ್ಮ ಹಕ್ಕನ್ನು ಅರಿತು ಚಲಾಯಿಸಲು ಕಲಿಯಬೇಕೆಂದು ತಿಳಿಸಿದರು. ಸಂಘಟಿತರಾಗಿ ಹೋರಾಡಲು ಸಿದ್ಧರಾದಾಗ ಮಾತ್ರ ಬೇಡಿಕೆಗಳು ಈಡೇರಲು ಸಾಧ್ಯ ಎಂದು ಕಾಂ| ಬಾಳೆ ತಿಳಿಸಿದರು.

ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಟಿ. ಡಿ. ಬಿ. ಅಧ್ಯಕ್ಷರು 7-10-82 ರಂದೇ ಗ್ರಾಮಕ್ಕೆ ಭೇಟಿ ನೀಡಿ ಒಂದು ರಸ್ತೆಗೆ ಮಂಜೂರು ನೀಡಿದ್ದಾರೆ. ಈ ಬೆಳವಣಿಗೆ ಗ್ರಾಮಸ್ಥರಲ್ಲಿ ಹರ್ಷವನ್ನು ತಂದಿದೆ.

○

ಜಿಲ್ಲಾಧಿಕಾರಿಯವರಿಗೆ ಮೂರ್ತೆದಾರರ ಮನವಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಂದಿ ಮೂರ್ತೆ ಮಾಡುವ ಸಾವಿರಾರು ಮೂರ್ತೆದಾರರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅವರ ಸಂಪಾದನೆ ತುಂಬಾ ಕಡಿಮೆಯಿದೆ. ಗುತ್ತಿಗೆ ಕಂಟ್ರಾಕ್ಟುದಾರರ ಕಿರುಕುಳ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಇದೆ. ಬಹಳ ಕಷ್ಟಕರವಾದ ಈ ಕೆಲಸದಿಂದ ಜೀವನ ಸಾಗಿಸುವ ಮೂರ್ತೆದಾರರಿಗೆ ಕಂಟ್ರಾಕ್ಟುದಾರರು ಕೊಡುವುದು ಲೀಟರಿಗೆ 0-70 ಪೈಸೆಯಿಂದ 0-75 ಪೈಸೆ ಮಾತ್ರ.

12-10-82ರಂದು ಸಿ.ಐ.ಟಿ.ಯು. ನೇತೃತ್ವದಲ್ಲಿ ನೂರಾರು ಮೂರ್ತೆದಾರರು ಮಂಗಳೂರಿಗೆ ಆಗಮಿಸಿ ಜಿಲ್ಲಾಧಿಕಾರಿಗೆ, ಕೆಲವೊಂದು ಸಮಸ್ಯೆಗಳ ಬಗ್ಗೆ ಗಮನಹರಿಸಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಲೀಟರ್ ಒಂದಕ್ಕೆ ರೂ. 1-50ರಂತೆ ದೊರೆಯಬೇಕು; ಇತರ ಕಾರ್ಮಿಕರಿಗೆ ದೊರೆಯುವ ಎಲ್ಲ ಸೌಲಭ್ಯಗಳು ಸಿಗಬೇಕು; ಮೂರ್ತೆಗೆ ಬೇಕಾದ ಸಾಮಗ್ರಿಗಳನ್ನು ಗುತ್ತಿಗೆ ಕಂಟ್ರಾಕ್ಟುದಾರರು ಒದಗಿಸಬೇಕು....ಇತ್ಯಾದಿ ಅಂಶಗಳು ಮನವಿಯಲ್ಲಿ ಒಳಗೊಂಡಿದ್ದವು.

○

ಹರಿಹರ ಪುರಸಭೆ ಚುನಾವಣೆ ಮುಂದೂಡಿಕೆಗೆ ಕಾರಣರಾರು ?

3-10-82 ರಂದು ನಡೆಯಬೇಕಾಗಿದ್ದ ಹರಿಹರ ಪುರಸಭಾ ಚುನಾವಣೆಗೆ ಕೆಲವು ಹಿತಾಸಕ್ತಿಗಳು ತಡೆಯಾಜ್ಞೆ ತಂದಿದ್ದರಿಂದ ಚುನಾವಣೆಯನ್ನು ಮುಂದೂಡಲಾಗಿದೆ ಜನತೆಯನ್ನು ಎದುರಿಸಲು ಧೈರ್ಯವಿಲ್ಲದ ಈ ದರಿದ್ರರು ಈ ತಡೆಯಾಜ್ಞೆಗೆ ಕಾರಣರಾಗಿದ್ದಾರೆ.

ಹರಿಹರದ ಪುರಸಭೆಯ ಚುನಾವಣೆಯಲ್ಲಿ ಇದುವರೆಗೆ ಅಧಿಕೃತವಾಗಿ ರಾಜಕೀಯ ಪಕ್ಷಗಳು ಸ್ಪರ್ಧಿಸಿರಲಿಲ್ಲ. 'ಗಾಂಜಿ ವೀರಪ್ಪ', 'ಸಿದ್ಧವೀರಪ್ಪ' ಗುಂಪುಗಳು ಚುನಾವಣೆಯಲ್ಲಿ ಧುಮುಕುತ್ತಿದ್ದವು. ಸುಮಾರು ಮೂವತ್ತು ವರ್ಷಗಳ ಹಿಂದೆ ಪುರಸಭೆ ಯಾವ ಸ್ಥಿತಿಯಲ್ಲಿತ್ತೋ, ಇಂದಿಗೂ ಯಾವುದೇ ಬದಲಾವಣೆಯಿಲ್ಲ. ತಮ್ಮ ಮನಬಂದಂತೆ ನಡೆದುಕೊಂಡು ಆಡಳಿತೆಯನ್ನೆಲ್ಲ ಮೂರಾಬಟ್ಟೆಗೊಳಿಸಲಾಗಿತ್ತು. ಜನತೆ ಈ ಹೊಲಸು ಆಡಳಿತದಿಂದ ಕಂಗಾಲಾಗಿ ಚುನಾವಣೆಯನ್ನೇ ಎದುರು ನೋಡುತ್ತಿದ್ದರು. ಚುನಾವಣೆ ಪ್ರಕಟವಾದೊಡನೇ ಕಾಂಗ್ರೆಸ್ಸಿನ ಹಿಂಬಾಲಕರನೇಕರು ತಕರಾರೆತ್ತಿ ತಡೆಯಾಜ್ಞೆ ತರಲು ಪ್ರಯತ್ನಿಸಿದರು. ಕಾಂಗ್ರೆಸ್ಸಿನವರಿಗೆ ಉಮೇದುವಾರರನ್ನು ಹುಡುಕುವ ದುರ್ಗತಿ ಒದಗಿತ್ತು. ಕಾಂಗ್ರೆಸ್ ಪ್ರಮುಖರೆಲ್ಲರೂ ಚುನಾವಣಾ ಕಣಕ್ಕೆ ಇಳಿದಿದ್ದರೂ, ಜಿಲ್ಲಾಧ್ಯಕ್ಷರು "ಉಮೇದುವಾರರನ್ನು ನಿಲ್ಲಿಸಿಯೇ ಇಲ್ಲ"ವೆಂಬ ಹೇಳಿಕೆ ನೀಡಿ ಅಪಹಾಸ್ಯಕ್ಕೆ ಗುರಿಯಾಗಬೇಕಾಯಿತು.

ಈ ಸಲದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಹೀಗಾಗಿ ಹೊಸ ವಾತಾವರಣ ಉಂಟಾಗಿತ್ತು. ಪ್ರಚಾರ ಕಾರ್ಯವೂ ನಡೆದಿತ್ತು.

ಕಾಂಗ್ರೆಸ್ಸಿನೊಳಗಿನ ವಿರೋಧಿ ಗುಂಪೊಂದು, "ತಡೆಯಾಜ್ಞೆ ತೆರವು ಮಾಡಿಕೊಂಡು ಬರುತ್ತೇವೆ; ಪ್ರಚಾರವನ್ನು ನಿಲ್ಲಿಸಬೇಡಿರೆಂದು" ತನ್ನ ಹಿಂಬಾಲಕರಿಗೆ ಹೇಳಿತ್ತು. ಇನ್ನೊಂದು ಗುಂಪು ಮೆರವಣಿಗೆ ಹೊರಡಿಸಿ, ತಡೆಯಾಜ್ಞೆ ತಂದವರು ತಾವಲ್ಲವೇದು ತೋರಿಸುವ ನಾಟಕವಾಡಿದರು. ಇವರಲ್ಲಿ "ಸಾಚಾ"ಗಳು ಯಾರೆಂಬುದೇ ಯಕ್ಷ ಪ್ರಶ್ನೆ. ಅಂತೂ 3-10-82 ರಂದು ನಡೆಯಬೇಕಾಗಿದ್ದ ಚುನಾವಣೆ ನಡೆಯಲೇ ಇಲ್ಲ.

ದುರ್ವ್ಯವಹಾರಗಳಲ್ಲಿ ಭಾಗಿಯಾದ ಈ "ಗುಂಪು"ಗಳ ಅಭ್ಯರ್ಥಿಗಳನ್ನು ಜನತೆ ಅಡ್ಡಗಟ್ಟಿ ನಿಲ್ಲಿಸಿ ಅವಮಾನ ಪಡಿಸಿದ ಘಟನೆಗಳೂ ನಡೆದಿರುವುದಾಗಿ ತಿಳಿದು ಬಂದಿದೆ.

ಸ್ವಹಿತಕ್ಕಾಗಿ ಮಾತ್ರ ಹೆಣಗುತ್ತಿರುವ ಇಂಥ 'ಗುಂಪು'ಗಳ ಅಭ್ಯರ್ಥಿಗಳನ್ನು ಮೂಲೆ ಗುಂಪು ಮಾಡಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತಿತರ ಪುರೋಗಾಮಿ ಪಕ್ಷಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಹರಿಹರದ ಜನತೆ ಸಮಯಾವಕಾಶ ಕಾಯುತ್ತಿದ್ದಾರೆ.

ವರದಿ : ವೈ. ಬಿ. ರೋಖಡೆ

●

ಬಿಜಾಪುರದಲ್ಲಿ ಗುಂಡೂರಾಯರಿಗೆ ಕಪ್ಪು ಬಾವುಟದ ಸ್ವಾಗತ

ಅಕ್ಟೋಬರ್ 12 ರಂದು ಬಿಜಾಪುರಕ್ಕೆ ಭೇಟಿ ನೀಡಿದ ಮುಖ್ಯ ಮಂತ್ರಿ ಗುಂಡೂರಾಯರಿಗೆ ಕಪ್ಪುಬಾವುಟದ ಸ್ವಾಗತ ದೊರೆಯಿತು. ಸಕಾಲಕ್ಕೆ ಮಳೆ ಬೀಳದೇ ಇಡೀ ಜಿಲ್ಲೆ ಕ್ಷಾಮ ಪೀಡಿತವಾಗಿರುವ ಸಂದರ್ಭದಲ್ಲಿ ತಮ್ಮ ಎಂಟು ಜನ ಮಂತ್ರಿಗಳೊಂದಿಗೆ ಅದ್ದೂರಿ ಪ್ರವಾಸ ಕೈಗೊಂಡಿದ್ದು ಜನತೆಯನ್ನು ಕೆರಳಿಸಿತು. ಈ ಪ್ರವಾಸದ ಸಂದರ್ಭದಲ್ಲಿ ಇಂಡಿ ವಿಧಾನಸಭಾ ಸದಸ್ಯ ಮಾನ್ಯ ಕಲ್ಲೂರ್ ಅವರು ತಮ್ಮ ನಾಯಕನಿಗೆ 'ಕೃತಜ್ಞತೆ' ಸಲ್ಲಿಸಲು 9 ಕೆ.ಜಿ. ತೂಕದ ಬೆಳ್ಳಿ ಪಂಪ್ ಸೆಟ್‌ನ್ನು ಸಲ್ಲಿಸುವ ಕಾರ್ಯಕ್ರಮ ಹಾಕಿಕೊಂಡಿದ್ದನ್ನೂ ಈ ಸಂದರ್ಭದಲ್ಲಿ ನೆನೆಯಬಹುದು.

1980 ಡಿಸೆಂಬರಿನಲ್ಲಿ ಬರಗಾಲ ಪರಿಸ್ಥಿತಿಯನ್ನು ವೀಕ್ಷಿಸಲು ಗುಂಡೂರಾಯರು ಬಿಜಾಪುರಕ್ಕೆ ಬಂದಾಗ, ರಾಜ್ಯದ ದುಷ್ಕಾಳ ಪರಿಸ್ಥಿತಿಯನ್ನು ಅಭ್ಯಾಸಮಾಡಿ ಕಾಯಂ ಪರಿಹಾರ ಸೂಚಿಸಲು ಒಂದು ಉಚ್ಛಮಟ್ಟದ ಕಮೀಶನ್ ನೇಮಿಸಬೇಕೆಂದು ಸಿ. ಪಿ. ಐ. (ಎಂ) ವಿನಂತಿಸಿತ್ತು. ಸೂಚನೆಯನ್ನು ಒಪ್ಪಿಕೊಂಡು ಮುಖ್ಯಮಂತ್ರಿ ಮೂರು ತಿಂಗಳೊಳಗೇ ಕಮಿಟಿ ನೇಮಿಸುವುದಾಗಿ ತಿಳಿಸಿದ್ದರು. ಆಶ್ವಾಸನೆಯಿತ್ತು 22 ತಿಂಗಳುಗಳು ಕಳೆದರೂ ಕಾರ್ಯಗತವಾಗದೇ ಉಳಿದಿದೆ.

ಸರಕಾರದ ಪೊಳ್ಳು ಆಶ್ವಾಸನೆಗಳನ್ನು ಬಯಲಿಗೆಳೆಯಲು ಕಪ್ಪು ಬಾವುಟ ಪ್ರದರ್ಶನದ ಕಾರ್ಯಕ್ರಮವನ್ನು ವಿರೋಧ ಪಕ್ಷಗಳು ಏರ್ಪಡಿಸಿದ್ದವು. ನೂರಾರು ರೈತರು, ವಿದ್ಯಾರ್ಥಿಗಳು, ನಾಗರೀಕರು ಈ ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ನೇತೃತ್ವವನ್ನು ಕಾಂ| ಭೀಮಶಿ ಕಲಾದಗಿ, ಚಂಚಲಕರ್, ಶ್ರೀ ನಾಗಠಾಣ, ಬಾಬುರೆಡ್ಡಿ ಮತ್ತು ಮಿರ್ಜಿ ಮೊದಲಾದವರು ವಹಿಸಿದ್ದರು.

ನನ್ನ ಭೂಗತ ಜೀವನದ ದಿನಗಳು

—ಇ. ಕೆ. ನಾಯನಾರ್

[ಕೇರಳದ ಮಾಜೀ ಮುಖ್ಯಮಂತ್ರಿ ಕಾಂ| ಇ. ಕೆ. ನಾಯನಾರ್ ಅವರ ನೆನಹುಗಳನ್ನೊಳಗೊಂಡ (ಆತ್ಮ ಚರಿತ್ರೆ) 'ಮೈ ಸ್ಟ್ರಗಲ್ಸ್' ಎಂಬ ಪುಸ್ತಕವನ್ನು ವಿಕಾಸ್ ಪಬ್ಲಿಶಿಂಗ್ ಹೌಸ್‌ನವರು ಇದೀಗ ಪ್ರಕಟಿಸಿದ್ದಾರೆ. — ಬೆಲೆ : 75 ರೂ. ಮೇ 31ರ ಆನ್‌ಲುಕರ್ ಇಂಗ್ಲೀಷ್ ಸಾಪ್ತಾಹಿಕದಲ್ಲಿ ಈ ಪುಸ್ತಕದ ಭಾಗವೊಂದು ಪ್ರಕಟವಾಗಿತ್ತು. ಐಕ್ಯರಂಗ ಓದುಗರಿಗೆ ಪರಿಚಯಿಸುವ ಉದ್ದೇಶದಿಂದ ಆನ್‌ಲುಕರ್‌ನಲ್ಲಿ ಬಂದಿರುವ ಭಾಗದ ಅನುವಾದವನ್ನಿಲ್ಲಿ ಕ್ರಮವಾಗಿ ಪ್ರಕಟಿಸುತ್ತಿದ್ದೇವೆ.

(ಕಾಂ| ಇ. ಕೆ. ನಾಯನಾರ್ ಹಳೇ ಮಲಬಾರಿನ 'ಕಲ್ಲಿಯಸ್ಸೇರಿ' ಎಂಬಲ್ಲಿ ಜಮೀನ್ದಾರಿ ಕುಟುಂಬವೊಂದರಲ್ಲಿ ಜನಿಸಿದರು. ಕಾಂ| ಇ. ಎಂ. ಎಸ್. ನಂಬೂದರಿಪ್ಪಾಡ್ ಮತ್ತು ಕಾಂ| ಕೃಷ್ಣ ಪಿಳ್ಳೆಯವರ ಪ್ರಭಾವಕ್ಕೊಳಗಾಗುವ ಮುನ್ನ ಕಾಂ| ನಾಯನಾರ್, ತಮ್ಮ ಸಹೋದರ ಕೆ. ಪಿ. ರಾಜಗೋಪಾಲನ್‌ರ ಮೂಲಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ್ದರು. ಕೇರಳದಲ್ಲಿ ಕಾಂಗ್ರೆಸ್ ಒಡೆಯುವ ಸಮಯಕ್ಕಾಗಲೇ ಕಾಂ| ನಾಯನಾರ್ ಕಮ್ಯೂನಿಸ್ಟರಾಗಿ ಪರಿವರ್ತಿತರಾಗಿದ್ದರು."

"1936 ರಿಂದ 1942ರ ನಡುವೆ ಕಮ್ಯೂನಿಸ್ಟ್ ಪಕ್ಷವನ್ನು ಬಹಿಷ್ಕರಿಸಿದ್ದ ಅವಧಿಯಲ್ಲಿ ಪೋಲೀಸರು ಒಂದು ನೆಪವೊಡ್ಡಿ ಕಮ್ಯೂನಿಸ್ಟ್ ಕಾರ್ಯಕರ್ತರನ್ನು ಬೇಟೆಯಾಡುತ್ತಿದ್ದರು. ನಾಯನಾರ್ ಅವರು, ಅತ್ಯಂತ ಕೋಲಾಹಲಕಾರಿಯಾದ 'ಮೊರಾಜಾ' ಮತ್ತು 'ಕಯ್ಯೂರು' ಪ್ರಕರಣಗಳಲ್ಲಿ ಪೋಲೀಸರಿಗೆ ಬೇಕಾಗಿದ್ದರು. ನಿಷ್ಠಾವಂತ ಸಂಗಾತಿಗಳ ಗುಪ್ತಜಾಲದ ಸಹಾಯದಿಂದ ಕಾಂ| ನಾಯನಾರ್ ಕಣ್ಣು ತಪ್ಪಿಸಿ ದಿನಗಳನ್ನು ಕಳೆದರು). (ಈ ಪೀಠಿಕೆಯು ಸಾಪ್ತಾಹಿಕದ ಉಲ್ಲೇಖ")].

1940ರ ಸೆಪ್ಟೆಂಬರ್ 15 ರಂದು ಉತ್ತರ ಮಲಬಾರ್ ಒಂದು ರಣರಂಗವಾಗಿತ್ತು. ಮೊರಾಜಾ, ಮಟ್ಟನ್ನೂರ್, ತೆಲ್ಲಿಚೆರಿ ಮತ್ತು ಕೂತುಪರಂಪುಗಳಲ್ಲಿ ಲಾಠಿಚಾರ್ಜು, ಗೋಲಿಬಾರ್‌ಗಳು ನಡೆದವು. ಅಬು ಎಂಬೊಬ್ಬ ರೈತ ಹಾಗೂ ಚಾತುಕುಟ್ಟಿಯೆಂಬ ಕಾರ್ಮಿಕನೊಬ್ಬನು ಗೋಲಿಬಾರ್‌ಗೆ ಆಹುತಿಯಾದರು. 1927ರ ಅನಂತರ ಇವರೇ ಪ್ರಥಮ ಹುತಾತ್ಮರು.

ನಾನು ಮನೆಯನ್ನು ತಲುಪಿದಾಗ ಸೆಪ್ಟೆಂಬರ್ 15 ರಂದು ನನ್ನೂರಿನ ರೈತರು ಒಂದು ಸಭೆ ನಡೆಸಲು ತೀರ್ಮಾನಿಸಿದ್ದಾರೆಂದು ಗೊತ್ತಾಯಿತು. ಈ ಸಭೆಗೆ ನನ್ನನ್ನೂ ಹಾಜರಾಗುವಂತೆ ಅವರು ಕೇಳಿಕೊಂಡರು. ನನ್ನ ಹಿರಿಯ ಸಹೋದರ ಊರಿನಲ್ಲಿರಲಿಲ್ಲ. ಕೆ. ಪಿ ಆರ್. ಗೋಪಾಲನ್‌ರವರು ಸಭೆಯ ಸಿದ್ಧತೆಯಲ್ಲಿ ನಿರತರಾಗಿದ್ದರು. ಆದ್ದರಿಂದ ನಾನು ಅಲ್ಲಿ ಉಳಿಯುವುದು ಅವಶ್ಯಕವಾಗಿತ್ತು. ಈ ಸಭೆಗೆ ಪೂರ್ಣಭಾವಿಯಾಗಿ ಕಲಿಯಾಸ್ಸೆರಿಯ ರೀಡಿಂಗ್ ರೂಂನಲ್ಲಿ ನಡೆದ ಸಭೆಯಲ್ಲಿ ರೈತ ಸಭೆಯನ್ನು ಮೊರಾಜಾದಲ್ಲಿಯೇ ನಡೆಸಬೇಕೆಂಬ ಒಂದು ಸಲಹೆ ಬಂದಿತು. ಆದರೆ ತುಸು ಚರ್ಚೆಯ ನಂತರ ಪಾಪ್ಪಿನಿಸ್ಸೆರಿಯಲ್ಲಿ ನಡೆಸಲು ತೀರ್ಮಾನಿಸಲಾಯಿತು. ಈ ಹಳ್ಳಿಗೆ ರೈತರು ಮೆರವಣಿಗೆಯಲ್ಲಿ ಹೋಗಲು ಸಿದ್ಧತೆ ನಡೆಸುತ್ತಿದ್ದರು. ಇದ್ದಕ್ಕಿದ್ದಂತೆ ಸಭೆಯನ್ನು ನಿಷೇಧಿಸಲಾಯಿತು. ವಾಲಪಟ್ಟಣಂನಲ್ಲಿಯ ಪಾಪ್ಪಿನಿಸ್ಸೆರಿಯಲ್ಲಿ ಸಭೆಯನ್ನು ನಿಷೇಧಿಸಿದ ಮೇಲೆ ನಾವು ಬೇರೆ ಸಾಧ್ಯತೆಗಳ ಬಗ್ಗೆ ಪರಿಶೀಲಿಸಿದೆವು.

"ಈ ಸಭೆಯು ನಡೆಯಲೇಬೇಕು. ನಿಲ್ಲಿಸುವ ಪ್ರಶ್ನೆಯೇ ಇಲ್ಲ" ಎಂದು ನಾನು ಒತ್ತಾಯಿಸಿದೆ. ಕೆ.ಪಿ.ಆರ್. ಹೊಸ ಸಲಹೆಯೊಂದನ್ನು ಮುಂದಿಟ್ಟರು. "ನಾವು ಮೊರಾಜಾದಲ್ಲಿ ಸಭೆ ನಡೆಸಬಹುದು. ತಾಳಿಪರಂಬು ಪೋಲೀಸರು ಮಾತ್ರ ಇದನ್ನು ನಿಷೇಧಿಸಲು ಸಾಧ್ಯ" ಎಂದು ಹೇಳಿದರು. ಆದ್ದರಿಂದ ನಾವು ಮೊರಾಜಾದ ಒಂದು ಸಣ್ಣ ಮಾರುಕಟ್ಟೆ ಪ್ರದೇಶವಾದ ಅಂಚಂಪೀಡಿಕಾದಲ್ಲಿ ಸಭೆ ನಡೆಸಲು ತೀರ್ಮಾನಿಸಿದೆವು. ಸೆಪ್ಟೆಂಬರ್ 15ರ ಬೆಳಿಗ್ಗೆಯೇ ಆತುರಾತುರವಾಗಿ ಈ ತೀರ್ಮಾನವನ್ನು ಕೈಗೊಳ್ಳಲಾಯಿತು. ಪಾಪ್ಪಿನಸ್ಸೆರಿಗೆ ಹೊರಟಿದ್ದ ಜಾಥಾಗಳನ್ನು ಅಂಚಂಪೀಡಿಕಾದ ಕಡೆಗೆ ತಿರುಗಿಸುವಂತೆ ತಕ್ಷಣ ನಾವು ಸ್ವಯಂಸೇವಕರನ್ನು ನೇಮಿಸಿದೆವು. ನಾನು ಕಲ್ಲಿಯಾಸ್ಸೆರಿಗೆ ಹೋಗಿ ಅಲ್ಲಿಂದ ಅಂಚಂಪೀಡಿಕಾಕ್ಕೆ ಹೊರಟು ಸಂಜೆ ನಾಲ್ಕು ಗಂಟೆಗೆ ಆ ಸ್ಥಳವನ್ನು ತಲುಪಿದೆನು. ಅಧ್ಯಕ್ಷರಾದ ವಿಷ್ಣು ಭಾರತೀಯನ್ ಮತ್ತಿತರರು ಇನ್ನೂ ಬಂದಿರಲಿಲ್ಲ. ಕೆ.ಪಿ.ಆರ್., ಟಿ. ರಾಘವನ್, ನಾರಾಯಣ ಮಾಸ್ತರ್ ಮತ್ತಿತರರೂ ಬಂದಿರಲಿಲ್ಲ. ಆದರೆ ಇನ್ನೂ ಅನೇಕರು ಅಲ್ಲಿದ್ದರು. ವಿವಿಧ ಪ್ರದೇಶಗಳಿಂದ ಜಾಥಾಗಳು ಬರುತ್ತಿದ್ದವು. ನಾನು ವೇದಿಕೆಯ ಬಳಿಗೆ ಹೋಗಿ ಪೋಲೀಸರಿಂದ ಉಂಟಾಗಬಹುದಾದ ತೊಂದರೆಯನ್ನು ಎದುರಿಸಲು ಕೆಲವು ಸಂಗಾತಿಗಳನ್ನು ವೇದಿಕೆಯ ಬಳಿಯೇ ಇರುವಂತೆ ವ್ಯವಸ್ಥೆ ಮಾಡಿದೆನು.

ರಸ್ತೆಯ ಎರಡೂ ಬದಿಗಳ ಅಂಗಡಿಗಳ ಮುಂಭಾಗದಲ್ಲಿ ಜನ ತುಂಬಿ ಹೋಗಿದ್ದರು. ಕಾಂಪೊಂಡುಗಳ ಮೇಲೂ ಜನರು ಸ್ಥಳಾವಕಾಶ ಮಾಡಿಕೊಂಡಿದ್ದರು. ಇನ್ನೂ ಬಹಳಷ್ಟು ರೈತ ಮೆರವಣಿಗೆಗಳು ಬರುವುದರಲ್ಲಿದ್ದವು. ಎತ್ತರವಾದ ಬಿದುರು ಬೊಂಬಿನ ತುದಿಯಲ್ಲಿ ಕೆಂಬಾವುಟವು ಸ್ವಚ್ಛಂದವಾಗಿ ಹಾರಾಡುತ್ತಿತ್ತು. ಜನಜಂಗುಳಿಯ ನಡುವಿನಿಂದ ವಿಷ್ಣು ಭಾರತೀಯನ್, ಕೆ. ಪಿ. ಆರ್. ಮತ್ತಿತರರು ವೇದಿಕೆಯ ಕಡೆಗೆ ಬರುತ್ತಿದ್ದುದನ್ನು ನಾನು ಕಂಡೆನು. 'ಇನ್‌ಕ್ವಿಲಾಬ್ ಜಿಂದಾಬಾದ್' ಎಂಬ ಘೋಷಣೆಯು ಮುಗಿಲನ್ನು ಮುಟ್ಟುತ್ತಿರುವಂತೆಯೇ ವಿಷ್ಣು ಭಾರತೀಯನ್, ಕೆ.ಪಿ.ಆರ್.ರವರು ನನ್ನನ್ನು ಸಮೀಪಿಸಿದರು. "ಇನ್ನೂ ಬಹಳಷ್ಟು ಜಾಥಾಗಳು ಬರಬೇಕಾಗಿರುವುದರಿಂದ ನಾವು ಈಗಲೇ ಸಭೆ ಪ್ರಾರಂಭಿಸಲಾಗುವುದಿಲ್ಲ" ಎಂದು ಹೇಳಿ ಕೆ.ಪಿ.ಆರ್. ಪುನಃ ಜನರ ನಡುವೆ ಹೋದರು.

ಇದ್ದಕ್ಕಿದ್ದಂತೆ ಪೋಲೀಸ್ ವ್ಯಾನೊಂದು ಜನರ ನಡುವಿನಿಂದ ನುಸುಳಿಕೊಂಡು ನಮ್ಮೆಡೆಗೆ ನುಗ್ಗಿ ಬಂತು. ತಾಳಿಪರಂಬುವಿನ ನ್ಯಾಯಾಧೀಶರು, ಸಬ್-ಇನ್‌ಸ್ಪೆಕ್ಟರ್ ಕುಟ್ಟಿಕೃಷ್ಣ ಮೆನನ್ ಮತ್ತು ವಾಳಪಟ್ಟಂನ ಪೋಲೀಸ್ ಇನ್‌ಸ್ಪೆಕ್ಟರ್‌ರವರು 15ಕ್ಕೂಹೆಚ್ಚು ಪೇದೆಗಳೊಂದಿಗೆ ವ್ಯಾನಿನಿಂದ ಹೊರಕ್ಕೆ ಜಿಗಿದರು. ಜನರನ್ನು ಲಾಠಿಯಿಂದ ತಳ್ಳುತ್ತ ಹೆಡ್-ಕಾನ್‌ಸ್ಟೇಬಲ್ ಗೋಪಾಲನ್‌ನಾಯರ್ ವೇದಿಕೆಯತ್ತ ಬಂದರು. ನಾನು ವಿಷ್ಣು ಭಾರತೀಯನ್ ಕಡೆ ನೋಡುತ್ತಾ "ಅವರು ನಮ್ಮತ್ತ ಬರುತ್ತಿದ್ದಾರೆ, ದಾರಿ ಮಾಡಿಕೊಡಿ" ಎಂದು ಹೇಳಿದೆನು. ನಾನು ಅವನ ಬಳಿ ನಿಂತೆನು, ಕೆ.ಪಿ.ಆರ್. ಸಭೆಯನ್ನು ಪ್ರಾರಂಭಿಸುವಂತೆ ಕೈ ಸನ್ನೆ ಮಾಡಿ ಹೇಳಿದರು. ತಕ್ಷಣ ವಿಷ್ಣು ಭಾರತೀಯನ್ ವೇದಿಕೆಯಮೇಲೇರಿದರು. ಸ್ವಲ್ಪ ದೂರದಿಂದ ಯಾರೋ ಸಭೆ ಪ್ರಾರಂಭವಾಗುತ್ತಿರುವುದಾಗಿ ಕೂಗಿದರು. ಜಾಥಾಗಳು ಸಮೀಪಿಸುತ್ತಿದ್ದಂತೆ ಘೋಷಣೆಗಳ ಧ್ವನಿ ತಾರಕಕ್ಕೇರಿತು. ನಾನು ಮುಂದೆ ಬಂದು "ಸಭೆ ಪ್ರಾರಂಭವಾಗುತ್ತಿದೆ, ಎಲ್ಲರೂ ಶಾಂತವಾಗಿ ಕುಳಿತುಕೊಳ್ಳಿ" ಎಂದು ಕೂಗಿದೆನು. ವೇದಿಕೆಯ ಮುಂಭಾಗದಲ್ಲಿದ್ದವರು ಕುಳಿತುಕೊಂಡರು. ಕುಟ್ಟಿ ಕೃಷ್ಣ ಮೆನನ್ ವೇದಿಕೆಯ ಬಳಿ ಬಂದರು. ನ್ಯಾಯಾಧೀಶರೂ, ಪೋಲೀಸರೂ ಸಮೀಪಕ್ಕೆ ಬಂದರು.

ವಿಷ್ಣು ಭಾರತೀಯನ್ ತಮ್ಮ ಭಾಷಣವನ್ನು ಪ್ರಾರಂಭಿಸಿದರು. "ಸಹೋದರರೇ ! ಸಂಗಾತಿಗಳೇ !..." ಸಭಿಕರು ಸಂಪೂರ್ಣವಾಗಿ ನಿಶ್ಯಬ್ಧರಾಗಿದ್ದರು. ಮುಂದೇನಾಗಬಹುದೆಂದು ಎಲ್ಲರೂ ಕುತೂಹಲದಿಂದ ವೀಕ್ಷಿಸುತ್ತಿದ್ದರು. ಕುಟ್ಟಿ ಕೃಷ್ಣಮೆನನ್ ನನ್ನ ಬಳಿಗೆ ಬಂದು ಕೋಪದಿಂದ ಹೇಳಿದನು. "ಸಭೆಯನ್ನು ನಿಷೇಧಿಸಿದ್ದೇವೆ. ನೀವು ಸಭೆ ನಡೆಸಕೂಡದು. ಜನರು ಮನೆಗೆ ಹೋಗಲಿ ಸಭೆಯನ್ನು ವಿಸರ್ಜಿಸಿಬಿಡಿ." ಸಭೆಯ ಅಧ್ಯಕ್ಷರು ಶಾಂತವಾಗಿ ಆದರೆ ದೃಢವಾಗಿ ಉತ್ತರಿಸಿದರು. "ನಾವು ಸಭೆಯನ್ನು ವಿಸರ್ಜಿಸಿಬಿಡುತ್ತೇವೆ, ಅದು ಮುಗಿದ ತಕ್ಷಣ." "ನಾನು ಎಲ್ಲರ ಬೆನ್ನು ಮೂಳೆಯನ್ನು ಮುರಿಯುತ್ತೇನೆ" ಎಂದು ಇನ್‌ಸ್ಪೆಕ್ಟರ್ ಗರ್ಜಿಸಿದನು. ನಾನು ಏನೇ ಬಂದರೂ ಎದುರಿಸಲು ಸಿದ್ಧವಾಗಿ ನಿಂತೆ. ಜನರು ಸುತ್ತಮುತ್ತ ನೋಡಿದರು. ಜನ ಜಂಗುಳಿಯ ಹಿಂಭಾಗದಿಂದ ಘೋಷಣೆಗಳು ಮೊಳಗಿದವು.

"ಇನ್‌ಕ್ವಿಲಾಬ್..."

"ಜಿಂದಾಬಾದ್ !"

"ಭೂಮಾಲೀಕರಿಗೆ ಧಿಕ್ಕಾರ"

"ಬ್ರಿಟಿಷರಿಗೆ ಧಿಕ್ಕಾರ"

ನಾನು ಗಟ್ಟಿಯಾಗಿ ಕೂಗಿ ಹೇಳಿದೆ. "ಸಭೆಯನ್ನು ವಿಸರ್ಜಿಸಲು ಅಧ್ಯಕ್ಷರಿಗೆ ಮಾತ್ರ ಅಧಿಕಾರವಿದೆ. ಈ ಮನುಷ್ಯನಿಗೆ ಆ ಅಧಿಕಾರವಿಲ್ಲ. ಇವನ ಮಾತಿಗೆ ಬೆಲೆ ಕೊಡಬೇಕಾದ್ದಿಲ್ಲ. ನಾವು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸುತ್ತೇವೆ. ಎಲ್ಲರೂ ನಿಶ್ಯಬ್ಧರಾಗಿರಿ". ಎಲ್ಲಾ ರೈತರು, ಕಾರ್ಮಿಕರು ಕುಳಿತುಕೊಂಡರು. ಪೋಲೀಸರ ಬೆದರಿಕೆಯು ನಿಷ್ಪ್ರಯೋಜಕವಾಯಿತು. ಸಭೆಯನ್ನು ವಿಸರ್ಜಿಸಲಾಗಿದೆಯೆಂದೂ, ಅಧ್ಯಕ್ಷರು ತಕ್ಷಣ ಜಾಗ ಖಾಲಿ ಮಾಡಬೇಕೆಂದು ಪೋಲೀಸರು ಅಬ್ಬರಿಸಿದರು. ಯಾರೂ ಏನನ್ನೂ ಹೇಳಲಿಲ್ಲ. ಕುಟ್ಟಿ ಕೃಷ್ಣ ಮೆನನ್ ಪೋಲೀಸ್ ಆಜ್ಞೆಯನ್ನು ಹಲವಾರು ಬಾರಿ ಪುನರುಚ್ಚರಿಸಿದರು. ಆ ಕಡೆ ಈ ಕಡೆ ಸುತ್ತುತ್ತಾ ತಾರಕ ಸ್ವರದಲ್ಲಿ ಪೋಲೀಸ್ ಆಜ್ಞೆಯನ್ನು ಅಬ್ಬರಿಸಿದರು. ಕೆ. ಪಿ. ಆರ್., ನಾರಾಯಣ ಮಾಸ್ತರ್ ಮತ್ತು ನಾರಾಯಣ ನಂಬೀಶನ್‌ರವರು ಜನ ಸಮೂಹದ ಹಿಂದೆ ಓಡಾಡುತ್ತಾ ಏಳುತ್ತಿದ್ದವರನ್ನು ಕುಳಿತುಕೊಳ್ಳುವಂತೆ ಕೇಳಿಕೊಳ್ಳುತ್ತಿದ್ದರು.

ಕುಟ್ಟಿ ಕೃಷ್ಣಮೆನನ್ ಅಧ್ಯಕ್ಷರ ಬಳಿಗೆ ಬಂದು "ನಾನು ನಿಮ್ಮನ್ನು ಬಡಿಯುತ್ತೇನೆ" ಎಂದು ಲಾಠಿ ಎತ್ತಿ ಬೆದರಿಸಿದನು. ಅವನು ಹೊಡೆದುಬಿಡುವನೇನೋ ಎಂದು ನಾನು ಮುಂದೆ ಬಂದೆನು. ಅಷ್ಟರಲ್ಲಿ ವಿಷ್ಣು ಭಾರತೀಯನ್ ಬಾವುಟವನ್ನು ಎತ್ತಿಹಿಡಿದು ನೆಲದ ಮೇಲೆ ಮಲಗಿ "ಇಲ್ಲ ನಾನು ಕದಲುವುದಿಲ್ಲ" ಎಂದು ಹೇಳಿದರು ಕುಟ್ಟಿ ಕೃಷ್ಣಮೆನನ್ ಲಾಠಿ ಎತ್ತಿ ಬಲವಾಗಿ ಹೊಡೆದನು. ಮೊದಲ ಏಟು ಧ್ವಜಕ್ಕೇ ಗುರಿಯಿಟ್ಟಿತ್ತು. ಆದರೆ ಅದು ನನ್ನ ಪಕ್ಕದಲ್ಲಿದ್ದವರಿಗೆ ಬಿತ್ತು. ಮೆನನ್ ಹುಚ್ಚನಂತೆ ಮುಂದೆ ನುಗ್ಗಿ ಜನರನ್ನು ಎಡಬಿಡದೆ ಬಡಿದನು. ಯಾರೊಬ್ಬರೂ ಸ್ವಲ್ಪವೂ ಕದಲಲಿಲ್ಲ.

"ಇನ್‌ಕ್ವಿಲಾಬ್..." "ಜಿಂದಾಬಾದ್ !" ಎಂದು ಸಹಸ್ರಾರು ಕಂಠಗಳು ಘೋಷಣೆ ಮಾಡಿದವು. ನ್ಯಾಯಾಧೀಶರು ಮತ್ತು ಪೋಲೀಸರು ವಿಷ್ಣು ಭಾರತೀಯನ್ ಬಳಿ ಬಂದರು. ಅವರನ್ನು ಬಂಧಿಸಿರುವುದಾಗಿ ಹೇಳಿ, ಭಾರತೀಯನ್‌ರವರನ್ನು ಸುತ್ತುವರಿದರು. ತಕ್ಷಣ ನಾನು ಎದ್ದು ನಿಂತೆನು. ಸಿಡಿಲಿನಂತೆ ಘೋಷಣೆಗಳು ಗುಡುಗಿದವು. ನಾನು ಎತ್ತರದ ಸ್ವರದಲ್ಲಿ ಕೂಗಿ ಹೇಳಿದೆ. "ಕಾಮ್ರೇಡ್ಸ್ ! ಧೈರ್ಯವಾಗಿ ಕುಳಿತುಕೊಳ್ಳಿ." ಪೋಲೀಸರು ಹಿಂಭಾಗಕ್ಕೆ ಹೋಗುತ್ತಿರುವುದು ಕಂಡು ಬಂದಿತು. ಜನಸಮೂಹದ ಮಧ್ಯೆ ನುಸುಳಿಕೊಂಡು ನಾನೂ ಆ ಕಡೆ ಹೋದೆನು. ಕಯ್ಯಾರಲಂನಿಂದ ಕುನ್ಹಿರಾಮನ್ ನಂಬಿಯಾರ್ ನೇತೃತ್ವದಲ್ಲಿ ಬಂದ ಜಾಥಾ ಸಭಾಂಗಣವನ್ನು ತಲುಪಿತು. "ಹಿಂದೆ ಹೋಗಿ" ಎಂದು ಪೋಲೀಸರು ಕೂಗಿದರು. ಕುನ್ಹಿರಾಮನ್ ನಂಬಿಯಾರ್ ಗುಡುಗಿದರು "ನಾವು ಮುಂದೆ ಮಾತ್ರ ಹೋಗುತ್ತೇವೆ";

ಇನ್‌ಸ್ಪೆಕ್ಟರ್ ಕುಟ್ಟಿ ಕೃಷ್ಣಮೆನನ್ ಕುನ್ಹಿರಾಮನ್ ನಂಬಿಯಾರ್ ತಲೆಯ ಮೇಲೆ ಲಾಠಿಯಿಂದ ಬಲವಾಗಿ ಹೊಡೆದರು. ನಂಬಿಯಾರ್ ಕೆಳಗೆ ಬಿದ್ದರು. ಕೆಳಗೆ ಬಿದ್ದ ಅವರ ದೇಹದ ಮೇಲೆಯೂ ಪೋಲೀಸರು ಧಾಳಿ ನಡೆಸಿದರು. ರಕ್ತವು ಎಲ್ಲ ಕಡೆ ಚಿಮ್ಮಿತು. ಜನರು ಕೋಪೋದ್ರಿಕ್ತರಾಗಿ ನೋಡುತ್ತಿದ್ದರು.

ಪೋಲೀಸರು ನಂಬಿಯಾರ್‌ರನ್ನು ಕಾಲಿನಿಂದ ಒದೆಯುತ್ತಾ ಹೊಡೆಯಲಾರಂಭಿಸಿದರು. "ನಿಲ್ಲಿಸಿ" ಎಂದು ನಾನು ಕೂಗಿದೆ—"ನಿಲ್ಲಿಸಿ" ಎಂದು ನನ್ನ ಹಿಂದಿನಿಂದ ಮತ್ತೊಬ್ಬರು ಕೂಗಿದರು. ನಾನು ಆ ಸ್ಥಳವನ್ನು ತಲುಪುವ ಮೊದಲೇ ಜನರುಸುತ್ತುವರಿದಿದ್ದರು. ಪೋಲೀಸರ ಕೈಗಳಿಂದ ಜನರು ಲಾಠಿಗಳನ್ನು ಕಿತ್ತುಕೊಂಡರು. ಪೋಲೀಸರ ಲಾಠಿಗಳಿಂದಲೇ ಪೋಲೀಸರನ್ನು ಬಡಿಯುತ್ತಿದ್ದರು. ನನ್ನ ಪಕ್ಕದಲ್ಲಿ ನಿಂತಿದ್ದವನೊಬ್ಬನು ಕೆಳಗೆ ಬಗ್ಗಿ ಕಲ್ಲೊಂದನ್ನು ಎತ್ತಿಕೊಂಡು ಕುಟ್ಟಿ ಕೃಷ್ಣಮೆನನ್ ಕಡೆ ಎಸೆದನು. "ಕಲ್ಲುಗಳನ್ನು ತೂರಬೇಡಿ" ಎಂದು ನಾನು ಕೂಗಿದೆ. ಆದರೆ ಎಲ್ಲ ಕಡೆಯಿಂದ ಕಲ್ಲುಗಳು ಗಾಳಿಯಲ್ಲಿ ಶಬ್ದ ಮಾಡುತ್ತ ತೂರಿ ಬಂದು ಕುಟ್ಟಿ ಕೃಷ್ಣಮೆನನ್‌ಗೆ ಬಡಿದವು. ಉದ್ವೇಗ ಮತ್ತು ಆವೇಶಕ್ಕೊಳಗಾದ ಜನರಗುಂಪಿನಿಂದ ನಿಶ್ಯಸ್ತ್ರರಾದ ಪೋಲೀಸರು ಪೆಟ್ಟು ತಿನ್ನುತ್ತಿದ್ದರು. ಹಿಂಭಾಗದಿಂದ ಗುಂಡಿನ ಶಬ್ದ ಕೇಳಿ ಬಂತು. ನಾನು

(6ನೇ ಪುಟ ನೋಡಿ)

ಕೇಂದ್ರ ಸಮಿತಿಯ ವರದಿ:

ತೃತೀಯ ಜಗತ್ತು ಮತ್ತು ಸಾಮ್ರಾಜ್ಯಶಾಹಿ

(10-10-82ರ ಸಂಚಿಕೆಯಿಂದ)

ಸದ್ಯಕ್ಕೆ ಪಶ್ಚಿಮ ಏಶಿಯಾ ಪ್ರದೇಶವು ತೃತೀಯ ಜಗತ್ತಿನ ರಾಷ್ಟ್ರಗಳು ಮತ್ತು ಸಾಮ್ರಾಜ್ಯಶಾಹಿಯ ನಡುವಿನ ಶಿಕ್ಕಾಟದ ಪ್ರಮುಖ ರಣರಂಗವಾಗಿರುವುದಾದರೂ ಈ ಘರ್ಷಣೆ ಇತರ ಪ್ರದೇಶಗಳಲ್ಲೂ ಮುಂದುವರಿಯುತ್ತಿದೆ. ಇವುಗಳಲ್ಲಿ ಕೆಲವನ್ನಾದರೂ ಹೆಸರಿಸಬೇಕು.

ಇಂಡೋ-ಚೀನಾ ಪ್ರದೇಶವು ಇವುಗಳಲ್ಲೊಂದು; ಇಲ್ಲಿನ ಕಂಪೂಚಿಯಾದಲ್ಲಿ ಪಾಲ್‌ಪಾಟ್ ಆಡಳಿತೆ ಹಾಗೂ ಹಿಂದಿನ ರಾಜನಾಗಿದ್ದ ಸಿಹನೌಕ್‌ರ ನೇತೃತ್ವದ ಕೆಲವು ಪ್ರತಿಗಾಮಿಗಳ ಹೊಸ ಒಕ್ಕೂಟವೊಂದು ತಲೆಯೆತ್ತಿದೆ.

ಕಂಪೂಚಿಯಾದಲ್ಲಿ ಪರಿಸ್ಥಿತಿ ಸುಧಾರಿಸಿರುವ ಕಾರಣ ಅಲ್ಲಿಂದ ತನ್ನ ಸೈನ್ಯದ ಒಂದು ಭಾಗವನ್ನು ಹಿಂದಕ್ಕೆ ಕರೆಸಿಕೊಳ್ಳುವುದಾಗಿಯೂ, ನೆರೆಯ ರಾಷ್ಟ್ರಗಳು ಸಹಕರಿಸಿದರೆ ಇದನ್ನನುಸರಿಸಿ ಇನ್ನೂ ಅನೇಕ ಕ್ರಮಗಳನ್ನು ತಾನು ಕೈಗೊಳ್ಳುವುದಾಗಿಯೂ ವಿಯಟ್ನಾಂ ಸಾರಿದೆ. 'ಕಂಪೂಚಿಯಾ ಪ್ರಶ್ನೆ'ಯನ್ನು ಸಂಬಂಧಪಟ್ಟ ರಾಷ್ಟ್ರಗಳು ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳಲೂ ಆ ಮೂಲಕ ಅದಕ್ಕೆ ರಾಜಕೀಯ ಪರಿಹಾರವನ್ನು ಪಡೆಯಲು ಸಾಧ್ಯವೆಂದೂ ಇದು ತೋರಿಸಿಕೊಟ್ಟಿದೆ. ಇಂಡೋ-ಚೀನಾದ ಮೂರು ರಾಷ್ಟ್ರಗಳು ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟದಲ್ಲಿರುವ ಇತರ ಐದು ದೇಶಗಳ ನಡುವಿನ ಸಂಬಂಧ ಸುಧಾರಣೆಗಾಗಿ ಮುಂದಿನ ಹೆಜ್ಜೆಗಳನ್ನು ಕೈಗೊಳ್ಳಲೂ ಇದು ದಾರಿಯನ್ನು ಸುಗಮಗೊಳಿಸಿದೆ. ಕಂಪೂಚಿಯಾದ ಹೊಸ ಒಕ್ಕೂಟವು ಉದಯಕ್ಕೆ ಬಂದಿರುವುದು ಇಂತಹ ಕ್ರಮಕ್ಕೆ ಅಡ್ಡಿಯುಂಟುಮಾಡುವ ಉದ್ದೇಶದಿಂದಲೇ. ವಿಯಟ್ನಾಂ ಮತ್ತು ಅದರ ನೆರೆಹೊರೆಯ ರಾಷ್ಟ್ರಗಳು ಅನುಸರಿಸುತ್ತಿರುವ ಉದಾರ ಮತ್ತು ತತ್ವನಿಷ್ಠ ಧೋರಣೆಯಿಂದಾಗಿ ಈ ಹೊಸ ಒಕ್ಕೂಟದ ಕುತಂತ್ರಗಳು ಸೋಲಿಸಲ್ಪಡುವುವೆಂದು ಆಶಿಸೋಣ.

ಮಾಲ್ವಿನಾಸ್ (ಫಾಕ್‌ಲ್ಯಾಂಡ್ಸ್) ದ್ವೀಪದ ಪ್ರಶ್ನೆಯಲ್ಲಿ ಅರ್ಜೆಂಟೀನಾ ಹಾಗೂ ಬ್ರಿಟನ್‌ಗಳ ನಡುವೆ ನಡೆದ ಸೆಣಸಾಟವು ಈ ಅವಧಿಯಲ್ಲಿ ನಡೆದ ಮತ್ತೊಂದು ಪ್ರಮುಖ ವಿದ್ಯಮಾನ. ಇದು ಬ್ರಿಟನ್ ನಡೆಸಿದ ಅಪ್ಪಟ ವಸಾಹತುಶಾಹಿ ಯುದ್ಧ. ಈ ಯುದ್ಧದಲ್ಲಿ ಬ್ರಿಟನ್‌ಗೆ ನೀಡಿದ ಬೆಂಬಲದಿಂದಾಗಿ ಅಮೇರಿಕವಂತೂ ಲ್ಯಾಟಿನ್ ಅಮೇರಿಕ ಹಾಗೂ ಕೆರಿಬಿಯನ್ ರಾಷ್ಟ್ರಗಳ ಕಣ್ಣಿನಲ್ಲಿ ಇನ್ನಷ್ಟು ಕೀಳಾಗಿಬಿಟ್ಟಿದೆ. ಈ ಪ್ರದೇಶದ ಎಲ್ಲ ರಾಷ್ಟ್ರಗಳೂ ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಬ್ರಿಟನ್ ಹಾಗೂ ಅಮೇರಿಕಾ ಸಂಯುಕ್ತ ಸಂಸ್ಥಾನದ ವಿರುದ್ಧ ಅರ್ಜೆಂಟೀನಾಕ್ಕೆ ಬೆಂಬಲ ನೀಡಿವೆ. ಸಮಾಜವಾದಿ ರಾಷ್ಟ್ರಗಳಂತೂ ವಸಾಹತುಶಾಹಿಯನ್ನು ಖಂಡತುಂಡವಾಗಿ ವಿರೋಧಿಸುವವುಗಳಾದ ಕಾರಣ ಅವು ಬ್ರಿಟನ್ ಹಾಗೂ ಅಮೇರಿಕಾದ ನಿಲವನ್ನು ಸ್ಪಷ್ಟವಾಗಿ ವಿರೋಧಿಸಿವೆ.

ತೀವ್ರವಾದ ಸಂಘರ್ಷಕ್ಕೆ ಒಳಗಾಗಿರುವ ಇನ್ನೂ ಒಂದು ಪ್ರದೇಶವೆಂದರೆ ದಕ್ಷಿಣ ಆಫ್ರಿಕಾ. ಪ್ರಿಟೋರಿಯಾದ ವರ್ಣದ್ವೇಷಿ ಆಡಳಿತೆಗೂ ಇಸ್ರೇಲಿಗಿರುವಂತೆ ಸಾಮ್ರಾಜ್ಯಶಾಹಿಯ ಬೆಂಬಲವಿದೆ. ದಕ್ಷಿಣ ಆಫ್ರಿಕವು ನಮಿಬಿಯಾದ ಸ್ವಾತಂತ್ರ್ಯದ ಬಗೆಗಿನ ಸಂ. ರಾ. ಸಂಘದ ತೀರ್ಮಾನಗಳನ್ನು ಉಲ್ಲಂಘಿಸುತ್ತಿದೆಯಷ್ಟೇ ಅಲ್ಲದೆ ಅಂಗೋಲಾ, ಮೊಜಾಂಬಿಕ್ ಮತ್ತು ಜಿಂಬಾವ್ವೆಗಳ ಮೇಲೆ ಅತಿಕ್ರಮಣ ನಡೆಸುವ ಮೂಲಕ 'ನೈಋತ್ಯ ಆಫ್ರಿಕಾದ ಜನತಾ ಸಂಘಟನೆ'ಯನ್ನು ದಮನಿಸಲು ಪ್ರಯತ್ನಿಸುತ್ತಿದೆ. ನಮಿಬಿಯಾದ ಜನತೆಯ ಹೋರಾಟವನ್ನು ಮುನ್ನಡೆಸುತ್ತಿರುವುದು ನೈಋತ್ಯ ಆಫ್ರಿಕಾ ಜನತಾ ಸಂಘಟನೆಯೇ, ಹಾಗೂ ಇದನ್ನು ನಮಿಬಿಯಾದ ವಿಮೋಚನಾ ಹೋರಾಟದ ಏಕಮೇವ ಪ್ರತಿನಿಧಿಯೆಂದು ಪರಿಗಣಿಸಲಾಗಿದೆ. ಈ ಹಿಂದೆ ಅನ್ವರ್ ಸಾದತ್ ಅವರ ನೆರವಿನಿಂದ ಕ್ಯಾಂಪ್ ಡೇವಿಡ್ ಒಪ್ಪಂದವನ್ನು ಅರಬರ ಮೇಲೆ ಹೇರಿ ಅವರ ಒಗ್ಗಟ್ಟನ್ನು ಮುರಿದ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಇದೀಗ ದಕ್ಷಿಣ ಆಫ್ರಿಕಾದಲ್ಲೂ ಇದೇ ಆಟವನ್ನು ಆಡುತ್ತಿದ್ದಾರೆ. ಆಫ್ರಿಕಾದ ಜನತೆಯ ಒಗ್ಗಟ್ಟಿನ ಪ್ರತೀಕವಾಗಿರುವ 'ಆಫ್ರಿಕನ್ ಐಕ್ಯತಾ ಸಂಘಟನೆ'ಯನ್ನು ಮುರಿಯಲೂ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪ್ರಯತ್ನಿಸುತ್ತಿದ್ದಾರೆ. ಅಮೇರಿಕಾದ ಶಸ್ತ್ರಾಸ್ತ್ರಗಳು ಮತ್ತು "ಸಲಹೆಗಾರರ" ನೆರವು ಪಡೆದ ಮೊರಾಕ್ಕೋ, ಪಶ್ಚಿಮ ಸಹಾರಾವನ್ನು ಕಬಳಿಸಲು ಪ್ರಯತ್ನಿಸುತ್ತಿದೆ. ಸಹಾರಾದ ಜನತೆ ಇತ್ತೀಚೆಗಷ್ಟೇ ಪಾಲಿಸಾರಿಯೋನ ಮುಂದಾಳುತ್ವದಲ್ಲಿ ಸ್ವತಂತ್ರ ಸಹಾರಾವಿ ಅರಬ್ ಗಣರಾಜ್ಯವನ್ನು ಸ್ಥಾಪಿಸಿದ್ದಾರೆ. ಮೊರಾಕ್ಕೋ ಮತ್ತು ಜೈರೆ ಮುಂತಾದ ಆಫ್ರಿಕಾದ ಪ್ರತಿಗಾಮಿ ಆಡಳಿತೆಗಳು ಇತ್ತೀಚೆಗೆ ನಡೆಯಬೇಕಾಗಿದ್ದ ಆಫ್ರಿಕನ್ ಏಕತಾ ಸಂಘಟನೆಯ ಹದಿನಾರನೇ ಶೃಂಗ ಸಮ್ಮೇಳನ ಜರಗದಂತೆ ಮಾಡಿವೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳು ಕ್ಯೂಬಾ ಮತ್ತು ನಿಕಾರಗುವಾಗಳ ವಿರುದ್ಧವೂ ಯುದ್ಧದ ಬೆದರಿಕೆ ಹಾಕುತ್ತಿದ್ದಾರೆ. ಎಲ್ ಸಾಲ್ವಡೋರ್, ಗ್ವಾಟೆಮಾಲಾ ಮತ್ತಿತರ ಲ್ಯಾಟಿನ್ ಅಮೇರಿಕದ ರಾಷ್ಟ್ರಗಳ ವಿಮೋಚನಾ ಚಳುವಳಿಗಳನ್ನು ಹತ್ತಿಕ್ಕಲು ಸಾಮ್ರಾಜ್ಯಶಾಹಿ ಅಮೇರಿಕಾ ಅಲ್ಲಿ ಸಶಸ್ತ್ರ ಹಸ್ತಕ್ಷೇಪ ನಡೆಸುತ್ತಿದೆ.

ವಿಶ್ವದ ವಿವಿಧ ಖಂಡಗಳಲ್ಲಿನ ರಾಷ್ಟ್ರೀಯ ವಿಮೋಚನಾ ಸಮರ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಐಕ್ಯತೆಯನ್ನು ಮುರಿಯಲು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಫ್ಯಾಸಿಸ್ಟ್ ಆಡಳಿತೆಗಳ ನೆರವಿನಿಂದ ಸಕಲ ಪ್ರಯತ್ನ ಮಾಡುತ್ತಿರುವ ವೇಳೆಯಲ್ಲೇ ಅವರ ನವ ವಸಾಹತುಶಾಹಿ ಧೋರಣೆಗಳು ಹಿಂದುಳಿದ ಜಗತ್ತಿನ ರಾಷ್ಟ್ರಗಳೊಂದಿಗೆ ಸಂಘರ್ಷವನ್ನೆದುರಿಸುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯ ಮುಗ್ಗಟ್ಟಿನ ಹೊರೆಯನ್ನು ತೃತೀಯ ಜಗತ್ತಿನ ಮೇಲೆ ಜಾರಿಸಿ ಬಿಡುವ ಪ್ರಯತ್ನಗಳಿಂದಾಗಿ ಮೂರನೇ ಜಗತ್ತು ಮತ್ತು ಸಾಮ್ರಾಜ್ಯಶಾಹಿಗಳ ನಡುವಣ ವೈರುದ್ಧ್ಯಗಳು ಇನ್ನಷ್ಟು ಹರಿತಗೊಂಡಿವೆ.

ತೃತೀಯ ಜಗತ್ತಿನ ಅನೇಕ ಹಿಂದುಳಿದ ರಾಷ್ಟ್ರಗಳ ಪ್ರತಿಗಾಮಿ ಆಡಳಿತೆಗಳು ಸ್ವತಃ ತೀವ್ರ ಮುಗ್ಗಟ್ಟನ್ನು ಎದುರಿಸುತ್ತಿರುವ ಕಾರಣ ಅವು ಸಾಮ್ರಾಜ್ಯಶಾಹಿಯ ಒತ್ತಡಗಳಿಗೆ ಬಲಿಬೀಳುವ ಸಾಧ್ಯತೆಗಳೂ ಸಾಕಷ್ಟಿವೆ.

ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿರುವ, ಅಮೇರಿಕನ್ ಆಧಿಪತ್ಯಕ್ಕೆ ಇಷ್ಟವಾಗದ ಸರಕಾರಗಳನ್ನು ಉರುಳಿಸುವ ಸಲುವಾಗಿ ಅಲ್ಲಿನ ರಾಜಕೀಯ ಪಕ್ಷಗಳಿಗೂ, ಸಂಸ್ಥೆಗಳಿಗೂ ಹಣಕಾಸಿನ ನೆರವು ನೀಡುವುದಾಗಿ ರೀಗನ್ ಆಡಳಿತೆ ಬಹಿರಂಗವಾಗಿ ಘೋಷಿಸಿದೆ. ಇಷ್ಟರವರೆಗೂ ಮುಚ್ಚುಮರೆಯಲ್ಲಿ ಮಾಡಲಾಗುತ್ತಿದ್ದ ಇಂತಹ ಪಿತೂರಿಯನ್ನು ಈಗ ರಾಜಾರೋಷವಾಗಿಯೇ ಮಾಡಲಾಗುತ್ತಿದೆ. ಇದು ತೃತೀಯ ಜಗತ್ತಿನ ಅನೇಕ ರಾಷ್ಟ್ರಗಳ ಆಡಳಿತೆಗಳು ಹಾಗೂ ಸಾಮ್ರಾಜ್ಯಶಾಹಿಯ ನಡುವೆ ತಿಕ್ಕಾಟವನ್ನು ಇನ್ನಷ್ಟು ಹರಿತಗೊಳಿಸುವುದು ಖಚಿತ.

ಭಾರತದ ಮುಂದಿರುವ ಅಪಾಯ :

ಭಾರತ ಮತ್ತು ಅದರ ಆಸುಪಾಸಿನ ಪ್ರದೇಶಗಳ ವಿಷಯದಲ್ಲೂ ಅಮೇರಿಕಾದ ಹಸ್ತಕ್ಷೇಪ ಮುಂದುವರಿದಿದೆ. ಹಿಂದೂ ಸಾಗರ ಮತ್ತು ಭಾರತದ ಗಡಿಯ ಸುತ್ತುಮುತ್ತ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಚಟುವಟಿಕೆ ತೀವ್ರಗೊಂಡಿದೆ. ಹಿಂದೂ ಸಾಗರವನ್ನು ಶಾಂತಿವಲಯವಾಗಿರಿಸಬೇಕೆಂಬ ವಿಶ್ವವ್ಯಾಪಿ ಕೇಳಿಕೆಯನ್ನು ಅಮೇರಿಕವು ಕಡೆಗಣಿಸಿದೆ. ಭಾರತವನ್ನೂ ಒಳಗೊಂಡಂತೆ ಸಾಗರತೀರದಲ್ಲಿರುವ ಮತ್ತು ಹಿನ್ನಾಡಿನ ಅನೇಕ ರಾಷ್ಟ್ರಗಳು ಹಿಂದೂ ಸಾಗರವನ್ನು ಯುದ್ಧ ಮುಕ್ತವಾಗಿರಿಸಬೇಕೆಂದು ಒತ್ತಾಯಿಸುತ್ತಿದ್ದು, ಈ ಬೇಡಿಕೆಗೆ ಸಮಾಜವಾದಿ ರಾಷ್ಟ್ರಗಳೂ ಬೆಂಬಲ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ಇಂತಹ ಸಾರ್ವತ್ರಿಕ ಬೇಡಿಕೆಗೆ ತಿರಸ್ಕಾರ ವ್ಯಕ್ತಪಡಿಸಿರುವುದು ಅಮೇರಿಕದ ಹಟಮಾರಿತನಕ್ಕೆ ನಿದರ್ಶನ. ನಮ್ಮ ನೆರೆಯ ಪಾಕಿಸ್ತಾನ ಸೈನಿಕ ಸರ್ವಾಧಿಕಾರಿ ಆಡಳಿತೆಗೆ ಅಮೇರಿಕಾವು ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಸರಬರಾಜು ಮಾಡುವ ಮೂಲಕ ಅದನ್ನು ಸೋವಿಯೆತ್ ಒಕ್ಕೂಟ ಮತ್ತು ಅಫಘಾನಿಸ್ತಾನಗಳ ವಿರುದ್ಧ ತಾನು ನಡೆಸುವ ಪಿತೂರಿಗೆ ಒಂದು ನೆಲೆಯಾಗಿ ಪರಿವರ್ತಿಸಿಕೊಂಡಿದೆ. ಆದರೆ ವಾಸ್ತವವಾಗಿ ಪಾಕಿಸ್ತಾನವನ್ನು ಭಾರತದ ವಿರುದ್ಧವೂ ಎತ್ತಿಕಟ್ಟಲಾಗುತ್ತಿದೆ.

ಸಾಮ್ರಾಜ್ಯಶಾಹಿಗಳ ಈ ರೀತಿಯ ಚಟುವಟಿಕೆಗಳಿಂದಾಗಿ ಅವು ಭಾರತದ ಮುಂದೆ ಒಡ್ಡಿರುವ ನೇರವಾದ ಅಪಾಯದ ಕುರಿತು ಆರು ಪಕ್ಷಗಳು ಯುದ್ಧ ವಿರೋಧಿ ಮತ್ತು ಶಾಂತಿಗಾಗಿ ನಡೆಸುತ್ತಿರುವ ಚಳುವಳಿಯು ಹಲವಾರು ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಡುತ್ತಿವೆ. ಒಂದೆಡೆ ಶಾಂತಿಗಾಗಿ ವಿಶ್ವದ ಎಲ್ಲೆಡೆ ನಡೆಯುತ್ತಿರುವ ಹೋರಾಟ ಮತ್ತು ಇನ್ನೊಂದೆಡೆ ಸ್ವಾತಂತ್ರ್ಯ, ರಾಷ್ಟ್ರೀಯ ಸಾರ್ವಭೌಮತೆ ಹಾಗೂ ಸಾಮ್ರಾಜ್ಯಶಾಹಿಗಳ ಬೆಂಬಲದಿಂದ ನಮ್ಮ ಮೇಲೆ ನಡೆಯಬಹುದಾದ ಆಕ್ರಮಣದ ವಿರುದ್ಧ ನಾವು ನಡೆಸುತ್ತಿರುವ ಹೋರಾಟ, ಇವೆರಡರ ನಡುವೆ ಇರುವ ನೇರವಾದ ಸಂಬಂಧವನ್ನೂ ಆರು ಪಕ್ಷಗಳ ಚಳುವಳಿ ಎತ್ತಿತೋರಿಸಿಕೊಟ್ಟಿದೆ.

ಪ್ರಧಾನಿಯ ಅಮೇರಿಕಾ ಸಂದರ್ಶನ :

ನಮ್ಮ ವಿಜಯವಾಡಾ ಕಾಂಗ್ರೆಸ್‌ನ ರಾಜಕೀಯ ನಿರ್ಣಯದಲ್ಲಿ ಹೇಳಿರುವಂತೆ, ವಿದೇಶ ನೀತಿಗೆ ಸಂಬಂಧಪಟ್ಟ ಅನೇಕ ಪ್ರಶ್ನೆಗಳಲ್ಲಿ ಇಂದಿರಾ ಗಾಂಧಿ ಸರಕಾರವು ಸರಿಯಾದ ನಿಲುವುಗಳನ್ನೇ ಅಂಗೀಕರಿಸಿದೆ. ಇದು ನಮ್ಮ ಕೆಲವು ಬೂರ್ಶ್ವಾ ವಿರೋಧ ಪಕ್ಷಗಳಿಗೂ ಅವುಗಳನ್ನು ಬೆಂಬಲಿಸುತ್ತಿರುವ ಪತ್ರಿಕೆಗಳಿಗೂ ಇಷ್ಟವಾಗುತ್ತಿಲ್ಲ. ಸರಕಾರವು ಸೋವಿಯತ್ ಒಕ್ಕೂಟದ ಕಡೆಗೆ ತುಸು ವಾಲಿಕೊಂಡಿದೆ ಎಂಬುದು ಅವುಗಳ ಆರೋಪ ಯಾಕೆಂದರೆ ಸರಕಾರವು ಅಮೇರಿಕಾದ ಕಡೆಗೆ ವಾಲಿಕೊಳ್ಳಬೇಕೆಂದು ಅವುಗಳ ಆಶಯ. ಪಾಲೆಸ್ತೀನ್ ವಿಮೋಚನಾ ಸಂಘಟನೆಯ ವಿರುದ್ಧವಾಗಿಯೂ ಸುವ್ಯವಸ್ಥಿತ ಅಪಪ್ರಚಾರವೊಂದು ನಡೆದಿದೆ; ಮತ್ತು ಇದರಲ್ಲಿ ಕೆಲವು ಬೂರ್ಶ್ವಾ ವಿರೋಧ ಪಕ್ಷಗಳೂ ಭಾಗಿಯಾಗಿವೆ. ಪ್ರಧಾನಿಯ ಅಮೇರಿಕಾ ಸಂದರ್ಶನಕ್ಕೆ ಸಿದ್ಧತೆ ನಡೆಸುವ ಸಂದರ್ಭದಲ್ಲಿ ಅಮೇರಿಕನ್ ಆಳುವ ವರ್ತುಲಗಳು ಈ ವಿದ್ಯಮಾನಗಳನ್ನೂ ಗಮನಿಸಿವೆಯೆನ್ನುವುದನ್ನು ತಿಳಿದಿರಬೇಕು.

ಅಮೇರಿಕಾ ಮತ್ತು ಇಂದಿರಾ ಸರಕಾರದ ನಡುವೆ ತೀವ್ರ ಭಿನ್ನಾಭಿಪ್ರಾಯವಿರುವುದು ಮುಖ್ಯವಾಗಿ ಅಮೇರಿಕವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವ ಪ್ರಶ್ನೆಯಲ್ಲೇ. ಪ್ರಧಾನಿಯ ಅಮೇರಿಕಾ ಭೇಟಿಗೆ ತುಸು ಮೊದಲು ಅಮೇರಿಕವು ಭಾರತಕ್ಕೂ ಶಸ್ತ್ರಾಸ್ತ್ರಗಳನ್ನು ನೀಡಲು ಸಿದ್ಧವಿರುವುದೆಂದು ತಿಳಿಸಲಾಗಿತ್ತು.

ಭಾರತ – ಅಮೇರಿಕಾ ಸಂಬಂಧಗಳನ್ನು ಬಾಧಿಸುವ ಇನ್ನೊಂದು ಪ್ರಶ್ನೆಯೆಂದರೆ ತಾರಾಪುರ ಅಣುಸ್ಥಾವರಕ್ಕೆ ಇಂಧನವನ್ನು ಸರಬರಾಜು ಮಾಡುವ ಪ್ರಶ್ನೆ. ಫ್ರಾನ್ಸ್‌ನ ಮುಖಾಂತರ ಇಂಧನ ಸರಬರಾಜನ್ನು ಮುಂದುವರಿಸಲಾಗುವುದೆಂದೂ ಇದೀಗ ಸಲಹೆ ಮಾಡಲಾಗಿದೆ. ಭಾರತ – ಅಮೇರಿಕಾ ಸಂಬಂಧಗಳನ್ನು ಸುಧಾರಿಸಲು ಏನಾದರೂ ಪ್ರಯತ್ನ ಮಾಡಬೇಕೆಂದೂ ಆ ಮೂಲಕ ಭಾರತ – ಸೋವಿಯತ್ ಮೈತ್ರಿ ಮತ್ತು ಸಹಕಾರದ ಒಪ್ಪಂದವನ್ನು ಮುರಿಯುವಂತೆ ಮಾಡಬೇಕೆನ್ನುವುದೇ ಇವುಗಳ ಹಿಂದಿರುವ ಉದ್ದೇಶ.

ಆದರೆ ಈ ಮುಖ್ಯ ಉದ್ದೇಶವೇ ಸಾಧನೆಯಾಗಲಿಲ್ಲ. ತಾನು ಯಾವುದೇ ರೀತಿಯ ಶಸ್ತ್ರಾಸ್ತ್ರ ಖರೀದಿಯಲ್ಲಿ ಆಸಕ್ತಿ ಹೊಂದಿಲ್ಲವೆನ್ನುವುದನ್ನು ಪ್ರಧಾನಮಂತ್ರಿಯವರು ಮಾತುಕತೆಗಳ ಆರಂಭದಲ್ಲೇ ಸ್ಪಷ್ಟಪಡಿಸಿಬಿಟ್ಟರು. ಅಮೇರಿಕಾ-ಭಾರತ ಸಂಬಂಧ ಹಾಗೂ ಹಲವಾರು ಅಂತರರಾಷ್ಟ್ರೀಯ ಪ್ರಶ್ನೆಗಳಲ್ಲಿ ತನ್ನ ಸರಕಾರವು ಅಂಗೀಕರಿಸಿದ್ದ ಹಾಗೂ ಸರ್ವವಿದಿತವಾಗಿದ್ದ ನಿಲುವೆಯನ್ನು ಇಂದಿರಾ ಗಾಂಧಿ ಅಮೇರಿಕದ ಭೇಟಿಯ ವೇಳೆಯೂ, ಆ ಬಳಿಕವೂ ಸಾಕಷ್ಟು ಒತ್ತಿ ಹೇಳಿದ್ದಾರೆ. ಭಾರತ-ಸೋವಿಯತ್ ಸಂಬಂಧಗಳು, ಲೆಬನಾನ್ ಮೇಲೆ ಇಸ್ರೇಲಿ ಆಕ್ರಮಣ, ಅಫಘಾನಿಸ್ತಾನ ಮತ್ತು ಕಂಪೂಚಿಯಾದಲ್ಲಿನ ಪರಿಸ್ಥಿತಿ, ಹಿಂದೂ ಸಾಗರ ಮತ್ತು ಪಾಕಿಸ್ತಾನಕ್ಕೆ ಶಸ್ತ್ರ ಸರಬರಾಜು ಮಾಡುವ ಪ್ರಶ್ನೆ-ಇತ್ಯಾದಿ ಅನೇಕ ವಿಷಯಗಳಲ್ಲಿ ಭಾರತ ಸರಕಾರದ ಅಂಗೀಕೃತ ನಿಲುವೆಯನ್ನೇ ಬಲವಾಗಿ ಪ್ರತಿಪಾದಿಸಲಾಗಿದೆ.

ತಾರಾಪುರ ಅಣುಸ್ಥಾವರಕ್ಕೆ ಇಂಧನ ಪೂರೈಕೆ ಮಾಡುವ ಪ್ರಶ್ನೆಯಲ್ಲಿ ಇಂದಿರಾ ಗಾಂಧಿ ಅವರು ಒಮ್ಮೆ ಉಪಯೋಗಿಸಲ್ಪಟ್ಟ ಇಂಧನವನ್ನು

(7ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ:

ಕರ್ನಾಟಕ ರಾಜ್ಯದಲ್ಲಿ ಚುನಾವಣೆ ಗೊಂದಲವೇಕೆ ಬೇಕು ?

—ಎನ್ಕೆ

ನಮ್ಮ ದೇಶದ ಸಂವಿಧಾನದಂತೆ ಐದು ವರ್ಷಕ್ಕೊಂದು ಸಲ ವಿಧಾನ-ಲೋಕ ಸಭೆಯ ಚುನಾವಣೆ ನಡೆಯಬೇಕಾಗಿದೆ. ಅವಿಶ್ವಾಸ ನಿರ್ಣಯ ಮಂತ್ರಿ ಮಂಡಲದ ವಿರುದ್ಧ ಮಂಜೂರಾದಾಗ ಸರಕಾರ ರಾಜೀನಾಮೆ ಕೊಡಬೇಕು; ವಿರೋಧ ಪಕ್ಷದವರಿಂದ ಸರಕಾರ ರಚಿಸಲು ಸಾಧ್ಯವಾಗದಿದ್ದರೆ ಹೊಸ ಚುನಾವಣೆ ನಡೆಯಬೇಕು. ಕೆಲವೊಂದು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ರಾಜ್ಯ ಸರಕಾರಗಳನ್ನು ವಜಾಗೊಳಿಸುವ ವಿಶೇಷಾಧಿಕಾರವನ್ನು ರಾಷ್ಟ್ರಾಧ್ಯಕ್ಷರಿಗೆ ಸಂವಿಧಾನ ನೀಡಿದೆ. ಆದರೂ ಹೆಚ್ಚೆಂದರೆ ಒಂದು ವರ್ಷದ ನಂತರ ಚುನಾವಣೆ ನಡೆಸಲೇಬೇಕು.

ಆದರೆ ಕಾಂಗ್ರೆಸ್ ಪಕ್ಷದ ಆಡಳಿತದ ವೈಖರಿಯೇ ಬೇರೆ. ತಮ್ಮ ಪಕ್ಷದೊಳಗಿನ ಗುಂಪುಗಾರಿಕೆ, ಆಂತರಿಕ ಜಗಳದಿಂದಾಗಿ ಮಂತ್ರಿ ಮಂಡಲಗಳು ಉರುಳುತ್ತಲೇ ಇವೆ. ಮಹಾರಾಷ್ಟ್ರ-ಆಂಧ್ರ ರಾಜ್ಯಗಳಲ್ಲಿ ಇಂದಿರಾ ಗಾಂಧಿ ನೇಮಿಸಿದ ವ್ಯಕ್ತಿ—ವಿಧಾನ ಸಭೆ ಸದಸ್ಯರಿಂದ ಚುನಾಯಿಸಲ್ಪಟ್ಟ ವ್ಯಕ್ತಿಗಳು—ಅಧಿಕಾರ ಸ್ವೀಕಾರ ಮಾಡಿದ ಕೆಲವೇ ದಿವಸಗಳಲ್ಲಿ ಅವರ ವಿರುದ್ಧ ಸಹಿ ಸಂಗ್ರಹ ಚಳುವಳಿ ಪ್ರಾರಂಭವಾಗುತ್ತದೆ. ಇಂದಿರಾ ಗಾಂಧಿಯವರು ಇಂಥ ಗುಂಪುಗಾರಿಕೆ, ಸಹಿ ಸಂಗ್ರಹ, ದಿಲ್ಲಿ ಯಾತ್ರೆಗಳಿಗೆ ಆರಂಭದಲ್ಲಿ ಸಿಡುಕಿನ ಪ್ರತಿಕ್ರಿಯೆ ತೋರಿಸಿದರೂ ಕೊನೆಗಳಿಗೆಯಲ್ಲಿ ಅಂತಹ ತಂತ್ರಗಳಿಗೆ ಮಣಿಯುತ್ತಾರೆ. ಆದರೆ ತನ್ನ ಮನಸ್ಸಿಗೆ ಬಂದವನನ್ನು—ತನಗೆ ಯಾವುದೇ ರೀತಿಯ ಸವಾಲೆಸೆಯಲು ಅಸಮರ್ಥವಾದ ನಿರುಪಯೋಗಿ ವ್ಯಕ್ತಿಯನ್ನು—ಮುಖ್ಯ ಮಂತ್ರಿಯನ್ನಾಗಿ ನೇಮಿಸುತ್ತಾರೆ.

ಕರ್ನಾಟಕದ ಭಿನ್ನಮತೀಯರು ಆಂಧ್ರದಷ್ಟು ಚಾಣಾಕ್ಷರೂ ಅಲ್ಲ, ಧೈರ್ಯಶಾಲಿಗಳೂ ಅಲ್ಲ. ಶ್ರೀಕಂಠಯ್ಯನವರಂಥ ಪಕ್ಷಾಂತರಿಗಳ ಬಲದಿಂದಲೇ ಗುಂಡೂರಾಯರ ರಥ ಚಲಿಸುತ್ತಿರುವುದರಿಂದ ರಾಯರ ಮುಖಂಡತ್ವವನ್ನೆದುರಿಸಲು ಯಾರೂ ಧೈರ್ಯ ತೋರಿಸುತ್ತಿಲ್ಲ. ಹಾಗೆ ಮಾಡಿದವರಿಗೆ ಮುಖ್ಯ ಮಂತ್ರಿಪಟ್ಟ ಸಿಗುವುದಿಲ್ಲೆಂಬುದನ್ನು ಅಮ್ಮಾವ್ರು ತೋರಿಸಿಕೊಟ್ಟಿದ್ದಾರೆ. ಆದರೂ ಕೂಡ ಈ ಸಲ ಸೇರಿದ ಕಾಂಗ್ರೆಸ್ ಮುಂದೆ ಗುಂಡೂರಾಯರನ್ನೆದುರಿಸುವ ಧೈರ್ಯವನ್ನು ವೀರಪ್ಪ ಮೊಯಿಲಿ, ಶ್ರೀಕಂಠಯ್ಯ, ಜಾಫರ್ ಷರೀಫ್‌ರಂತವರು ತೋರ್ಪಡಿಸಿದರು. ಆದರೆ ದಿಲ್ಲಿಯ ತಂಪು ಹವೆ ಎಲ್ಲರನ್ನೂ ತಣ್ಣಗೆ ಮಾಡಿದಂತೆ ಕಂಡು ಬರುತ್ತದೆ. ಧರ್ಮಸಿಂಗ್ ಅವರನ್ನು ಚುನಾವಣೆ ಸಮಯದಲ್ಲಿ ಕೆ.ಪಿ.ಸಿ.ಸಿ. ಅಧ್ಯಕ್ಷರನ್ನಾಗಿ ಮಾಡುವ ಪ್ರಯತ್ನದಲ್ಲಿ ಗುಂಡೂರಾಯರು ಸೋತರೆ, ಗುಂಡೂರಾಯರಿಗೆ ತಕ್ಕ ಸವಾಲು ನೀಡುವಲ್ಲಿ ಮೊಯಿಲಿ ಗುಂಪು ಹಿಂದೆ ಬಿದ್ದ ಕಾರಣ, ಬೆಂಗಳೂರು ಪತ್ರಿಕಾ ಪರಿಷತ್ತಿನಲ್ಲಿ ಮೊಯಿಲಿಯವರು ದಿಲ್ಲಿಯ ಉಗುಳನ್ನು ಗುಂಡೂರಾಯರ ಸಮಕ್ಷಮದಲ್ಲಿ ನುಂಗಿ, ನಮ್ಮಿಬ್ಬರೊಳಗೆ ಯಾವದೇ ಭಿನ್ನಾಭಿಪ್ರಾಯವಿಲ್ಲೆಂಬುದನ್ನು ಸಾರ್ವಜನಿಕರಿಗೆ ತೋರ್ಪಡಿಸಿದ್ದಾರೆ. ಆದರೆ ವಿರೋಧ ಪಕ್ಷಗಳು ಬಲಸಂವರ್ಧನೆ ಮಾಡಿಕೊಳ್ಳುವ ಮುಂಚೆಯೇ ಡಿಸೆಂಬರ್ ತಿಂಗಳಲ್ಲೇ ಚುನಾವಣೆ ಮುಗಿಸಿ, ಯಾವ ಗೊಂದಲವಿಲ್ಲದೆ ರಾಯರ ಆಡಳಿತೆ ಮುಗಿಸಬೇಕೆಂದು ಅಮ್ಮಾವ್ರ ವಿಚಾರವಿದ್ದಂತೆ ಕಂಡು ಬರುತ್ತದೆ. ಏಕ ವ್ಯಕ್ತಿ ಸರ್ವಾಧಿಕಾರದಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕಾಗಲೀ, ಪಕ್ಷದ ನಿಲುವಿಗಾಗಲೀ ಬೆಲೆಯಿಲ್ಲ. ಸರ್ವಾಧಿಕಾರಿಯ ನಿರ್ಣಯವೇ ಕೊನೆ ನಿರ್ಣಯ. ಚುನಾವಣೆಯನ್ನೆದುರಿಸಲು ತಯಾರಿ ಮಾಡುತ್ತಿದ್ದಂತೆಯೇ ಎಂಥ ನಿರ್ಣಯ ಹೊರ ಬೀಳುತ್ತದೆಂಬುದನ್ನು ನೋಡೋಣ.

ಕರ್ನಾಟಕ ರಾಜಕೀಯದಲ್ಲಿ ಹೊಸ ತಿರುವು

ಕರ್ನಾಟಕದ ರಾಜಕೀಯದಲ್ಲಿ ಹೊಸ ತಿರುವನ್ನು ಕಾಣಬಹುದಾಗಿದೆ. ಪ್ರಜಾಸತ್ತಾತ್ಮಕ ಸಮಾಜವಾದಿ ಪಕ್ಷದ ಅಧ್ಯಕ್ಷ ಎಚ್. ಎನ್. ಬಹುಗುಣ ಅವರು ಬೆಂಗಳೂರಿಗೆ ಬಂದಾಗ ಅವರಿಗೆ ದೊರೆತ ಸ್ವಾಗತ ಮತ್ತು "ವಿಧಾನ ಸಭಾ ಚುನಾವಣೆಗಳನ್ನು ಎದುರಿಸಬೇಕಾಗಿರುವ ಕರ್ನಾಟಕ—ಆಂಧ್ರ ರಾಜ್ಯಗಳಲ್ಲಿ ತಮ್ಮ ಪಕ್ಷವು ಕಾಂಗ್ರೆಸ್ (ಐ) ವಿರುದ್ಧ ಹೋರಾಡಲು ಪ್ರಜಾಸತ್ತಾತ್ಮಕ, ಎಡ ಪಂಥೀಯ ಹಾಗೂ ಜ್ಯಾತ್ಯಾತೀತ ವಿರೋಧ ಪಕ್ಷಗಳ ಏಕತೆಗೆ ಪ್ರಯತ್ನಿಸುವುದಾಗಿ" ಹೇಳಿದ ಮಾತುಗಳು ಮಹತ್ವದ್ದಾಗಿವೆ. ಇದಕ್ಕೆ ಪೂರಕವಾಗಿ, ಕಳೆದ 2 – 3 ವರ್ಷಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ನಡೆದ ಪೋಲೀಸ್ ಗೋಲಿಬಾರಿನ ನ್ಯಾಯಾಂಗ ತನಿಖೆ, ಕಡೂರು ಮತ್ತಿನ್ನಿತರ ನ್ಯಾಯಾಂಗ ತನಿಕೆಯ ವರದಿಗಳ ಪ್ರಕಟಣೆ, ಹಗಲು ದರೋಡೆಗಳಿಂದ ಜನರಿಗೆ ರಕ್ಷಣೆ, ಹದಗೆಡುತ್ತಿರುವ ಕಾನೂನು ವ್ಯವಸ್ಥೆಯಲ್ಲಿ ಸುಧಾರಣೆ, ಎಲ್ಲ ಖಟ್ಲೆಗಳ ವಾಪಸಾತಿ,ಮೊದಲಾದ ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳ ಕುರಿತು ಹೋರಾಟ ನಡೆಸಲು ತಾ. 11 ರಂದು ಎಲ್ಲ ವಿರೋಧ ಪಕ್ಷಗಳು ಸೇರಿ ಕೈಗೊಂಡ ನಿರ್ಣಯಗಳು ಕರ್ನಾಟಕದ ರಾಜಕೀಯದಲ್ಲಿ ತಿರುವುಂಟುಮಾಡುವುದರಲ್ಲಿ ಸಂಶಯವಿಲ್ಲ. ಎಲ್ಲ ವಿರೋಧ ಪಕ್ಷಗಳಿಗೆ ಒಪ್ಪಿಗೆ ಯಾದ ಸಮಸ್ಯೆಗಳ ಕುರಿತು ಪ್ರತಿಭಟನೆ ವ್ಯಕ್ತ ಮಾಡಲು, ಚಳುವಳಿ ಹೂಡಲು ಪ್ರಯತ್ನ ನಡೆದಿರುವುದು ಸ್ವಾಗತಾರ್ಹ.

ಸರ್ವಾಧಿಕಾರಿ ಶಕ್ತಿಯ ವಿರುದ್ಧ, ಅಧ್ಯಕ್ಷೀಯ ಮಾದರಿ ಸರ್ಕಾರದ ಯೋಜನೆಯ ವಿರುದ್ಧ, ಪೋಲೀಸ್ ದಬ್ಬಾಳಿಕೆಯ ವಿರುದ್ಧ, ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ನಡೆಯುವ ತುರ್ತು ಹೋರಾಟದಲ್ಲಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡಬೇಕು. ಜನತಾ ಪ್ರಜಾಪ್ರಭುತ್ವ ರಂಗದ ರಚನೆಗೆ ಅದು ಸಹಾಯಕಾರಿಯಾಗುತ್ತದೆ.

ಜಲಂದರ್ ಪಾರ್ಟಿ ಕಾಂಗ್ರೆಸ್ಸಿನ ಗೊತ್ತುವಳಿಯಲ್ಲಿ ಹೇಳಿದಂತೆ "ಈ ರಂಗವನ್ನು ಕಟ್ಟುವ ಪ್ರಯತ್ನವು, ಜನತೆಯು ಬಂಡವಾಳಶಾಹಿ ಭೂಮಾಲಿಕ ಪಕ್ಷಗಳ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದಂಥ ಸ್ಥಿತಿಯನ್ನು...ಕೊನೆಗಾಣಿಸುವುದಕ್ಕಾಗಿ ವರ್ಗ ಶಕ್ತಿಗಳ ಪರಸ್ಪರ ಹೊಂದಾಣಿಕೆಯಲ್ಲಿ ಬದಲಾವಣೆಯನ್ನು ತರುವ ಪ್ರಯತ್ನದ ಅಂಗವಾಗಿದೆ."

ಚುನಾವಣೆಯ ದಿನಗಳು ಸಮೀಪಿಸುತ್ತಿದ್ದಂತೆ—ಅದೇ ಒಂದೇ ಗುರಿಯಲ್ಲದಿದ್ದರೂ, ಜನಜಾಗೃತಿ ಮೂಲಕ, ಜನತೆಯನ್ನು ಸಂಘಟಿಸಿ, ಜನವಿರೋಧ ನೀತಿಗಳ ವಿರುದ್ಧ ಸಂಯುಕ್ತ ಹೋರಾಟ ನಡೆಸಲು, ಎಲ್ಲ ವಿರೋಧ ಪಕ್ಷಗಳು ಹಾಕಿಕೊಂಡಿರುವ ಕಾರ್ಯಕ್ರಮ ಸ್ವಾಗತಾರ್ಹ. ಸಿ.ಪಿ.ಐ.(ಎಂ) ತನ್ನ ಜಲಂದರ್ ಮತ್ತು ವಿಜಯವಾಡಾ ಪಾರ್ಟಿ ಕಾಂಗ್ರೆಸ್ಸಿನಲ್ಲಿ ಈ ಮಾತನ್ನೇ ಒತ್ತಿ ಹೇಳಿದೆ. ಜನರ ರಕ್ಷಣೆ—ಹಕ್ಕಿಗಾಗಿ ಎಲ್ಲ ವಿರೋಧ ಪಕ್ಷಗಳೊಡನೆ ಸೇರಿ ಹೋರಾಟ, ಚುನಾವಣೆಯಲ್ಲಿ ಸರ್ವಾಧಿಕಾರಿ-ಜಾತೀಯ ಶಕ್ತಿಗಳನ್ನು ದೂರವಿಟ್ಟು ಹೋರಾಟ — ಇದು ಸಿ.ಪಿ.ಐ.(ಎಂ) ನಿಲುವು. ತಾ| 11 ರಂದು ವಿರೋಧ ಪಕ್ಷಗಳು ಕೈಗೊಂಡ ನಿಲುವು, ಕಾರ್ಯಕ್ರಮಗಳೆಲ್ಲ ಸರಿಯಾಗಿದ್ದು ಅವುಗಳನ್ನು ಕಾರ್ಯರೂಪಕ್ಕೆ ತರಲು ಪಾರ್ಟಿ ಮತ್ತು ಎಲ್ಲ ಸಾಮೂಹಿಕ ಘಟಕಗಳು ಶಕ್ತಿಮೀರಿ ಪ್ರಯತ್ನ ಮಾಡುವುದಗತ್ಯ.

ಸರಕಾರದ ನಾಚಿಕೆಗೆಟ್ಟ ಕ್ರಮ—ಪ್ರತಿರೋಧ ಅಗತ್ಯ

ರಾಜ್ಯ ಸರಕಾರದ ಹಲವಾರು ಖಾತೆಗಳಲ್ಲಿ 50,000ಕ್ಕೂ ಮೇಲ್ಪಟ್ಟು ಮೂರನೆ ದರ್ಜೆ ನೌಕರರ ಜಾಗ ಖಾಲಿ ಬಿದ್ದು 2-3 ವರ್ಷಗಳಾದವು. ಹಾಗೆಯೇ ಮೇಲ್ದರ್ಜೆ ನೌಕರರ ಸಾವಿರಾರು ಸ್ಥಾನಗಳನ್ನೂ ತುಂಬಬೇಕಾಗಿದೆ. ನಾಲ್ಕನೇ ದರ್ಜೆ ನೌಕರರನ್ನು ಬಿಟ್ಟು ಉಳಿದೆಲ್ಲ ನೌಕರರನ್ನು ಪಬ್ಲಿಕ್ ಸರ್ವಿಸ್ ಕಮಿಶನ್ ಮೂಲಕ ತುಂಬಲಾಗುತ್ತಿತ್ತು. ಕಳೆದ 2-3 ವರ್ಷಗಳಿಂದ ಇದು ಅಸ್ತವ್ಯಸ್ತಗೊಂಡಿದೆ.

ಬಂಡವಾಳಶಾಹಿ ಪಕ್ಷದಲ್ಲಾಗಲೀ, ಸರಕಾರದಲ್ಲಾಗಲೀ ಸುಲಿಗೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳ ಕುರಿತಷ್ಟೇ ಏಕರೂಪಕ ನಿಲುವೆಗಳಿವೆ. ಆದರೆ ಇತರ ವಿಷಯಗಳಲ್ಲಿ ಯಾವ ಸಾಮ್ಯವೂ ಇಲ್ಲ.

ಹಳೇ ಪದ್ಧತಿಯಂತೆ ನೌಕರರ ನೇಮಕಾತಿಗಾಗಿ ಹಣ ತುಂಬಿಸಿಕೊಂಡು ಪಬ್ಲಿಕ್ ಸರ್ವಿಸ್ ಕಮಿಶನ್ ಅರ್ಜಿಗಳನ್ನು ಆಹ್ವಾನಿಸಿತ್ತು. ಪರೀಕ್ಷೆ ಮುಗಿದು 3 ವರ್ಷಗಳಾದರೂ ನಿರ್ಣಯ ಹೊರಬಿದ್ದಿಲ್ಲ. ಕಾರಣ ಬಂಡವಾಳಶಾಹಿ ಸರಕಾರದ ಅನಿಶ್ಚಿತ ನೀತಿ. ತನ್ನ ಪಕ್ಷದವರಿಗೆ ಹಣ ಮಾಡಲು ಅನುಕೂಲವಾಗುವಂತೆ, ಸರಕಾರದವರು ಪಿ.ಎಸ್.ಸಿ. ಮೂಲಕ ಮಾಡಬೇಕಾದ ನೇಮಕಾತಿಗಳಿಗೆ ತಡೆ ಹಾಕಿ, ತಮ್ಮ ಜನರಿಂದ ತುಂಬಿದ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗಳನ್ನು ನೇಮಿಸಿತು. ಸಮಿತಿ ಸದಸ್ಯರೆಲ್ಲ ಸಾಕಷ್ಟು ತಿಂದು ತೇಗಿ ಸಾರ್ಥಕರಾದರು.

ಸುಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆ ಬಗೆಹರಿಸುವ ಸಲುವಾಗಿ 15 ಸಾವಿರ ಸ್ಟೈಪೆಂಡರಿಗಳನ್ನು ನೇಮಿಸಿಕೊಂಡು ಎರಡು ವರ್ಷಗಳು ಮೀರಿವೆ. ಹಲವಾರು ಜನ ಮದುವೆಯಾದವರಿದ್ದೇವೆ, ವಯಸ್ಸು ಮೀರಿದವರಿದ್ದೇವೆ,ಸಾಕಷ್ಟು ಖಾಲಿ ಜಾಗಗಳೂ ಇವೆ, ನಮ್ಮನ್ನೆಲ್ಲ ಕಾಯಂ ಮಾಡಬೇಕೆಂದು ಸ್ಟೈಫೆಂಟರಿಗಳೆಲ್ಲ ಚಳುವಳಿ ಹೂಡುತ್ತಲಿದ್ದಾರೆ. ಗುಂಡೂರಾಯರಿಗೆ ಬೆಳ್ಳಿಯ ಗಧೆ ಅರ್ಪಿಸಿದ್ದಾರೆ, ಆಶ್ವಾಸನೆಗಳ ಸುರಿಮಳೆಯಾಗಿದೆ, ಆದರೆ 15 ಸಾವಿರ ಸುಶಿಕ್ಷಿತ ಸ್ಟೈಫೆಂಡರಿಗಳಿಗೆ 50 ಸಾವಿರ ಖಾಲಿ ಜಾಗದಲ್ಲಿ ಖಾಯಂ ನೌಕರಿ ಸಿಗಲಾರದಾಗಿದೆ. ಇದರಲ್ಲೂ ರಾಜಕಾರಣವಿದೆ. ತಮ್ಮ ಕೆಲಸಗಳಿಗಾಗಿ ಹಣ ಸುರಿಯುವ ಚಟ ಧಾರಾಳವಾಗಿ ಜನರಲ್ಲಿ ಬೆಳೆದಿದೆಯೆಂಬ ಗುಟ್ಟು ಕಾಂಗ್ರೆಸ್ ಸರಕಾರಕ್ಕೆ ತಿಳಿದಿರುವಾಗ, ತಮ್ಮ ಪಾರ್ಟಿ ಸದಸ್ಯರಿಗೆ ಇದರ ಲಾಭ ಮಾಡಿಸಿಕೊಟ್ಟರೇನು ತಪ್ಪು ? ಆ ಕಾರಣದಿಂದಲೇ "ತಮ್ಮವರಿಂದ'' ತುಂಬಿದ 22 ನೇಮಕಾತಿ ಸಮಿತಿಗಳನ್ನು ನೇಮಿಸಿ, 50 ಸಾವಿರ ಮೂರನೇ ದರ್ಜೆ ನೌಕರರಿಂದ "ಹೊಸ ಮಾರ್ಕೆಟ್ ಧಾರಣೆಗನುಸಾರವಾಗಿ ಬೆಲೆ ಪಡೆದು" ನೇಮಕಗಳಾಗಲೆಂದು ಅವಕಾಶ ಮಾಡಿಕೊಟ್ಟಿದ್ದಾರೆ ಗುಂಡೂರಾವ್ ಸರಕಾರ. ನಿರುದ್ಯೋಗಿಗಳನ್ನು ಸುಲಿಯುವ ದುಷ್ಟ ನೀತಿ ಇದಾಗಿದೆ. ಕಾಂಗ್ರೆಸ್ ಸರಕಾರದ ಕಿಸೆಕಳ್ಳರ ಈ ಸಮಿತಿಗಳನ್ನು ಎಲ್ಲರೂ ಬಹಿಷ್ಕರಿಸಬೇಕು.

ನ್ಯಾಯಾಧೀಶರ ನೇಮಕದಲ್ಲೂ ವಿಳಂಬವೇಕೆ ಗೊತ್ತೆ ?

ಅರ್ಧ ಲಕ್ಷಕ್ಕೂ ಮೇಲ್ಪಟ್ಟು ಖಾಲಿ ಇರುವ ರಾಜ್ಯ ಸರಕಾರಿ ಖಾತೆಗಳ ಜಾಗ ತುಂಬುವುದರಲ್ಲಿ "ತಮ್ಮವರಿಗೆ" ಹಣಗಳಿಸಲು ಅವಕಾಶ ಮಾಡಿಕೊಡುವ ಉದ್ದೇಶದಿಂದ ವಿಳಂಬ ನೀತಿಯನ್ನನುಸರಿಸುತ್ತಿರುವ ಬಂಡವಾಳಶಾಹಿ-ಭೂಮಾಲಿಕ ವರ್ಗದ ಕಾಂಗ್ರೆಸ್ (ಐ) ಸರಕಾರ, ನ್ಯಾಯಾಧೀಶರ ನೇಮಕದಲ್ಲೂ ವಿಳಂಬ ನೀತಿಯನ್ನನುಸರಿಸುವುದೇಕೆ, ಗೊತ್ತೇ ? ಆ ಉದ್ದೇಶ ಬೇರೆ. "ತಾನು ಹೇಳಿದಂತೆ ನಡೆಯುವ ನ್ಯಾಯಾಧೀಶರನ್ನು ನೇಮಿಸುವ ಉದ್ದೇಶದಿಂದ'' ಈ ವಿಳಂಬ ನಡೆದಿದೆ. ಇತ್ತೀಚಿಗೆ ಲೋಕ ಸಭೆಯಲ್ಲಿ ಪ್ರಕಟವಾದ ಅಂಕೆ ಸಂಖ್ಯೆಗಳಂತೆ 1977ರಲ್ಲಿ 18,215 ಕೇಸುಗಳು ಬಾಕಿ ಉಳಿದಿದ್ದರೆ, 1982ರಲ್ಲಿ 48,643 ಸುಪ್ರೀಂ ಕೋರ್ಟಿನಲ್ಲಿ ಬಾಕಿ ಉಳಿದಿವೆ. ಹೈಕೋರ್ಟುಗಳಲ್ಲಿ 6,75,000, ಜಿಲ್ಲಾ ಕೋರ್ಟುಗಳಲ್ಲಿ 31.21 ಲಕ್ಷ, ಮ್ಯಾಜಿಸ್ಟ್ರೇಟ್ ಕೋರ್ಟುಗಳಲ್ಲಿ 60 ಲಕ್ಷಕ್ಕೂ ಮೇಲ್ಪಟ್ಟು ಮೊಕದ್ದಮೆಗಳು ನಿಕಾಲೆಯಾಗದೆ ಕೊಳೆಯುತ್ತಿವೆ. ದೇಶದ ಹೈಕೋರ್ಟುಗಳಲ್ಲಿ 94 ಸ್ಥಾನಗಳನ್ನು ತುಂಬಬೇಕಾಗಿದೆ. ಹಾಗೆಯೇ ನಮ್ಮ ರಾಜ್ಯದಲ್ಲಿ ಕೆಳಗಿನಿಂದ ಮೇಲಿನ ವರೆಗೆ ಹಲವಾರು ನ್ಯಾಯಾಧೀಶರನ್ನು ನೇಮಿಸಬೇಕಾಗಿದೆ.

ನ್ಯಾಯಾಧೀಶರ ನೇಮಕದಲ್ಲಿ ವಿಳಂಬಕ್ಕೆ ರಾಜ್ಯ ಸರಕಾರಗಳೇ ಕಾರಣ ಎಂದು ಕೇಂದ್ರ ಕಾನೂನು ಮಂತ್ರಿ ಜಗನ್ನಾಥ್ ಕೌಶಲ್ ಮೊನ್ನೆ ಲೋಕ ಸಭೆಯಲ್ಲಿ ತಿಳಿಸಿದ್ದಾರೆ. ನ್ಯಾಯಾಧೀಶರನ್ನು ನೇಮಿಸುವಲ್ಲಿ ಯಾಕೆ ವಿಳಂಬವಾಗುತ್ತಿದೆಂಬ ಸಂಗತಿ ಜಗನ್ನಾಥ್ ಕೌಶಲ್‌ರಿಗೆ ಗೊತ್ತು. ತನ್ನ ಸರ್ವಾಧಿಕಾರಿ ಮುಂದಾಳು ಇಂದಿರಾ ಗಾಂಧಿಗೆ ತಾನು ಹೇಳಿದಂತೆ ಕೇಳುವ ನ್ಯಾಯಾಧಿಶ, ತನ್ನ ಆದೇಶದಂತೆ ನಿರ್ಣಯ ನೀಡುವ ನಾಯಾಧೀಶರು ಬೇಕಾಗಿದೆ. ಅಂಥ ವ್ಯಕ್ತಿಗಳನ್ನು ಹುಡುಕುತ್ತಿದ್ದಾರೆ. ತನಗೆ ತೃಪ್ತಿ ನೀಡುವ ವ್ಯಕ್ತಿ ಸಿಗುವ ತನಕ ಎಷ್ಟು ಖಟ್ಲೆಗಳು ಬಾಕಿ ಉಳಿದಿವೆಂಬುದನ್ನು ಲಕ್ಷಿಸದೆ, ನ್ಯಾಯಾಧೀಶರ ಕುರ್ಚಿ ಖಾಲಿ ಇಡಲಾಗುತ್ತಿದೆಂಬ ವಿಷಯವನ್ನು ಜನತೆಗೆ ತಿಳಿಸಿ ಹೇಳಿ, ಅವರನ್ನು ಜಾಗೃತಗೊಳಿಸುವುದಗತ್ಯ. ಇಂದಿರಾ ಗಾಂಧಿಯ ಈ ಧೋರಣೆ ಅಪಾಯಕಾರಿ. ಎಲ್ಲ ವಿರೋಧ ಪಕ್ಷಗಳೂ, ಸಾಮೂಹಿಕ ಸಂಘಟನೆಗಳೂ ನ್ಯಾಯಾಂಗ ಸುಧಾರಣೆಗಾಗಿ ಒಂದೆಡೆ ಹೋರಾಡುತ್ತಿರುವಾಗಲೇ, "ತನ್ನಂತೆ ವರ್ತಿಸುವ" ನ್ಯಾಯಾಧೀಶರನ್ನು ನೇಮಿಸುವ ದುರುದ್ದೇಶದಲ್ಲಿ ನ್ಯಾಯಾಧೀಶರನ್ನು ನೇಮಿಸುವಲ್ಲಿ ವಿಳಂಬ ನೀತಿಯನ್ನನುಸರಿಸುತ್ತ ಜನತೆಗೆ ನ್ಯಾಯ ನಿರಾಕರಿಸುತ್ತಿರುವ ಇಂದಿರಾ ಕಾಂಗ್ರೆಸ್ ಪಕ್ಷ ಮತ್ತು ಸರಕಾರದ ನೀತಿಯ ವಿರುದ್ಧ ಪ್ರಚಾರ-ಪ್ರಕ್ಷೋಭೆ ನಡೆಸುವುದಗತ್ಯ.

ಪ್ರಾಂತ ರೈತ ಸಂಘದ ಕರೆಯ ಮೇರೆಗೆ

ಯಶಸ್ವೀ ಕಾರ್ಯಕ್ರಮ

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಗುರುತಿಸಿಕೊಂಡಿದ್ದ ಪ್ರಗತಿಪರ ಕೃಷಿ ಸುಧಾರಣೆ ಕಾರ್ಯಕ್ರಮವನ್ನು ಕಾಂಗ್ರೆಸ್ ಸರಕಾರ ಜಾರಿಗೆ ತರುವದೆಂಬ ನಿರೀಕ್ಷೆ ಸಂಪೂರ್ಣ ಸುಳ್ಳಾಗಿದೆ. ಕೃಷಿಯನ್ನು, ಕಚ್ಚಾಮಾಲು ಒದಗಿಸಲು ಬಂಡವಾಳವನ್ನು ಸಂಚಯಿಸಿ ಕೊಡುವ ಬಂಡವಾಳಶಾಹಿ ಪರ ವರ್ಗ ಹಿತಾಸಕ್ತಿಗಳಿಗೆ ಅಳವಡಿಸಿಕೊಂಡಿರುವುದರಿಂದ ಬಹು ಸಂಖ್ಯಾತ ಕೃಷಿನಿರತ ರೈತಾಪಿ ಜನರ ಜೀವನ ಪರಿಸ್ಥಿತಿ ಇಂದು ಚಿಂತಾಜನಕವಾಗಿದೆ.

ಕಾಂಗ್ರೆಸ್ ಸರಕಾರಗಳ 'ಭೂಸುಧಾರಣೆ'ಗಳು ರೈತಾಪಿ ಜನರಿಗೆ ಪರಿಹಾರಗಳನ್ನು ನೀಡುವುದರಲ್ಲಿ ವಿಫಲಗೊಂಡಿದೆ. ಕೃಷಿ ಕಾರ್ಮಿಕರ ಸಂಖ್ಯೆ ಹೆಚ್ಚುತ್ತ ನಡೆದಿದೆ. ಕಾನೂನಿನ ರಕ್ಷಣೆ ಇಲ್ಲದೆ, ಉದ್ಯೋಗದ ಭರವಸೆ ಇಲ್ಲದೆ, ಕನಿಷ್ಟ ಜೀವನಾವಶ್ಯಕ ಕೂಲಿ ಇಲ್ಲದೆ ತೀರ ಬಡತನದ ಜೀವನ ನಡೆಸಬೇಕಾಗಿದೆ. ಕೃಷಿ ಹುಟ್ಟುವಳಿ ಮಾರುಕಟ್ಟೆ ದೊಡ್ಡ ಗುತ್ತೇದಾರಿ ದಲ್ಲಾಳಿಗಳ ಕಪಿಮುಷ್ಟಿಯಲ್ಲಿ ಸಿಕ್ಕಿದೆ. ರೈತ ಶ್ರಮಪಟ್ಟು ಬೆಳೆಸಿದ ಫಸಲನ್ನು ಅತಿ ಕಡಿಮೆ ಬೆಲೆಗೆ ಮಾರುವಂತಾಗಿದೆ.

ಕೃಷಿ ಅಭಿವೃದ್ಧಿಯ ಕ್ರಮಗಳನ್ನು ಕೈಗೊಳ್ಳುವಲ್ಲಿ ಸರಕಾರ ಹಿಂದೆ ಬಿದ್ದಿದೆ. ಬರಗಾಲಕ್ಕೆ ತುತ್ತಾಗುತ್ತ ಬಂದಿರುವ ಪ್ರದೇಶಗಳಲ್ಲಿ ಆದ್ಯತೆ ನೀಡಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿಕೊಡುವಲ್ಲಿ ಅಸಮರ್ಥವಾಗಿದೆ. ಅನೇಕ ಯೋಜನೆಗಳು ಅಸಮರ್ಥ ಹಂತದಲ್ಲಿ ಉಳಿದಿವೆ. ಕೃಷಿರಂಗಕ್ಕೆ ಸೌಲಭ್ಯ ನೀಡಿರುವುದು ಸಹ ಕಡಿಮೆಯಾಗಿದೆ ಸರಕಾರಿ,ಸಹಕಾರಿ ಸಾಲ ಸೌಲಭ್ಯಗಳನ್ನು ಒದಗಿಸಿಕೊಡುವಾಗ ಬಡ, ಮಧ್ಯಮ ವರ್ಗದ ರೈತರಿಗೆ ಹೆಚ್ಚು ಪ್ರಾಶಸ್ತ್ಯ ನೀಡುವುದನ್ನು ಸರಕಾರ ಅಲಕ್ಷಿಸಿದೆ. ಗ್ರಾಮಾಂತರ ಪ್ರದೇಶಗಳಿಗೆ ಪ್ರಾಥಮಿಕ ಸೌಲಭ್ಯಗಳನ್ನು ಒದಗಿಸಲೂ ಸರಕಾರ ವಿಫಲಗೊಂಡಿದೆ.

ರೈತಾಪಿ ವರ್ಗದ, ಕೃಷಿ ಕೂಲಿಕಾರರ ಸಮಸ್ಯೆಗಳ ಕುರಿತು ಸರಕಾರವನ್ನು ಎಚ್ಚರಿಸಲು ಕರ್ನಾಟಕ ಪ್ರಾಂತ ರೈತ ಸಂಘ ಬೃಹತ್ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದೆ. ಬರಲಿರುವ ಡಿಸೆಂಬರ್ 13 ರಂದು ವಿಧಾನ ಸೌಧ ಚಲೋ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಪೂರಕವಾಗಿ ಜಿಲ್ಲಾವಾರು ಸಮಸ್ಯೆಗಳನ್ನು ಮುಂದಿಟ್ಟು, ಹಾಗೂ ಡಿಸೆಂಬರ್ 13ರ ಕಾರ್ಯಕ್ರಮವನ್ನು ಪ್ರಚುರಗೊಳಿಸಲು ಅಕ್ಟೋಬರ್ 11 ರಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಸತ್ಯಾಗ್ರಹ ಕಾರ್ಯಕ್ರಮಕ್ಕೆ ಕರೆಕೊಡಲಾಗಿತ್ತು. ಅಕ್ಟೋಬರ್ 11ರ ಕಾರ್ಯಕ್ರಮ ವರದಿಗಳು ನಮಗೆ ಕಲುಪಿದ್ದು ವಿವರಗಳು ಇಂತಿವೆ:

ಮಂಗಳೂರು :

ಜಿಲ್ಲಾ ರೈತ ಸಂಘದ ಆಶ್ರಯದಲ್ಲಿ 11-10-82 ರಂದು ನಿಯೋಗವೊಂದು ಜಿಲ್ಲಾಧಿಕಾರಿಗಳಲ್ಲಿ ತೆರಳಿ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರ ಸಲ್ಲಿಸಿತು. ನಿಯೋಗದ ನಾಯಕತ್ವವನ್ನು ಕಾಂ| ಅಬ್ರಹಾಂ ಕರ್ಕಡ್, ಯು. ಜನಾರ್ಧನ ನಾಯಕ್ ವಹಿಸಿದ್ದರು.

ಮನವಿಯ ಮುಖ್ಯಾಂಶಗಳು :

ಭೂ ಸುಧಾರಣೆಯ ಮೂಲಕ ರೈತರಿಗೆ ಅವರು ಸಾಗುವಳಿ ಮಾಡುತ್ತಾ ಬಂದ ಭೂಮಿಯನ್ನು ಉಚಿತವಾಗಿ ಕೊಡುವುದಾಗಿ ಸರಕಾರವು ಹೇಳುತ್ತಾ ಬಂದಿದ್ದರೂ, ಈಗ ರೈತರಿಂದ ಕಡ್ಡಾಯವಾಗಿ ಮತ್ತು ಮನಬಂದಂತೆ ಭೂಮಿಯ ಪರಿಹಾರ ವಸೂಲು ಮಾಡುತ್ತಿರುವುದನ್ನು ನಿಲ್ಲಿಸಿ, ರೈತರಿಗೆ ಉಚಿತವಾಗಿ ಭೂಮಿ ಸಿಗುವಂತೆ ಕಾನೂನಿನಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕು; ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗುವಂತೆ ಏರ್ಪಾಡು ಮಾಡಬೇಕು; ಹಳೆಯ ಗೇಣಿ ವಸೂಲು ಮಾಡುತ್ತಿರುವುದನ್ನು ನಿಲ್ಲಿಸಬೇಕು; ಲೆವಿ ಭತ್ತಕ್ಕೆ ಕ್ವಿಂಟಾಲಿಗೆ ರೂ. 150 ರಂತೆ ನಿಗದಿ ಮಾಡಬೇಕು; 1974ರಲ್ಲಿ ನೆರೆಯಿಂದಾಗಿ ಮನೆ ಕಳೆದುಕೊಂಡವರಿಗೆ ಸರಕಾರ ಕೊಟ್ಟ ಸಾಲವನ್ನು ಮನ್ನಾ ಮಾಡಬೇಕು; ಸಹಕಾರಿ ಸಂಘಗಳು ಸಾಲ ವಸೂಲಿಗಾಗಿ ಜಪ್ತಿ ಮಾಡುವುದನ್ನು ನಿಲ್ಲಿಸಬೇಕು; ಭೂ ನ್ಯಾಯ ಮಂಡಳಿಗಳಲ್ಲಿ ವಿವಾದಗಳು ಇತ್ಯರ್ಥವಾಗಿ ಅನುಭೋಗದ ಹಕ್ಕು ಪಡೆದ ರೈತರ ವಿರುದ್ಧ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದು, ರೈತರ ಕೈಯಿಂದ ಭೂಮಿ ತಪ್ಪಿಸುವುದನ್ನು ತಡೆಯಲು ಸರಕಾರವು ಸೂಕ್ತ ಕ್ರಮ ಕೈಗೊಳ್ಳಬೇಕು; ಕೃಷಿ ಕಾರ್ಮಿಕರಿಗೆ ಜೀವನ ನಿರ್ವಹಣೆಗೆ ಬೇಕಾದ ಕನಿಷ್ಠ ಕೂಲಿ ನಿಗದಿ ಮಾಡಿ ಜ್ಯಾರಿ ಮಾಡಬೇಕು ಹಾಗೂ ಕೆಲಸದ ಭದ್ರತೆ ಒದಗಿಸಬೇಕು... ಇತ್ಯಾದಿ.

ಬೆಂಗಳೂರು :

ಪ್ರಾಂತ ರೈತ ಸಂಘದ ಕರೆಗೆ ಓಗೊಟ್ಟು ಜಿಲ್ಲೆಯ ಬೇರೆ ಬೇರೆ ಸ್ಥಳಗಳಿಂದ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಆಗಮಿಸಿದ ರೈತರಿಗೆ ಪೋಲಿಸರು ನಿಷೇದಾಜ್ಞೆಯ ನೆಪ ತೋರಿಸಿ ಧರಣಿ ನಡೆಸಲು, ಮೆರವಣಿಗೆ ನಡೆಸಲು ಅವಕಾಶ ಕೊಡಲಿಲ್ಲ. ಕಾರಣ ಧರಣಿ ಮತ್ತು ಮೆರವಣಿಗೆಯನ್ನು ರದ್ದುಗೊಳಿಸಿ ಬೇರೆಡೆ ಸಭೆ ನಡೆಸಲಾಯಿತು.

ಸಭೆಯನ್ನುದ್ದೇಶಿಸಿ ಕಾಂ| ಮುಗುವಾಳಪ್ಪ, ಪಿ. ಜಗನ್ನಾಥ, ರಾಮಭದ್ರಯ್ಯ, ಲಕ್ಕಣ್ಣ ಮತ್ತು ಕಾಂ| ಪಿ. ಕೆ. ಸುಬ್ರಮಣಿ ಮೊದಲಾದವರು ಮಾತನಾಡಿ ಪೋಲಿಸರ ವರ್ತನೆಯನ್ನು ಖಂಡಿಸಿದರು.

ಆರಂಭದಲ್ಲಿ ಕೆ. ಜಿ. ಎಫ್. ನಲ್ಲಿ ಗೂಂಡಾ ದಾಳಿಗೀಡಾಗಿ ಸಾವನ್ನಪ್ಪಿದ ಸಂಗಾತಿ ಕಾಂ| ಆರೋಗ್ಯದಾಸ್‌ರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕೊನೆಯಲ್ಲಿ ಕಾಂ| ಜಿ. ಸಿ. ಗಂಗಯ್ಯ ವಂದನೆ ಸಲ್ಲಿಸಿದರು ನಂತರ ಜಿಲ್ಲಾಧಿಕಾರಿಗಳಲ್ಲಿ ನಿಯೋಗವೊಂದು ತೆರಳಿ ಮನವಿ ಪತ್ರ ಸಲ್ಲಿಸಿತು.

ಮನವಿಯ ಮುಖ್ಯಾಂಶಗಳು :

ರೈತರು ಬೆಳೆದ ಬೆಳೆಗೆ ನ್ಯಾಯ ಬೆಲೆ ನಿಗದಿ ಮಾಡಬೇಕು; ಜಿಲ್ಲೆಯ 11 ತಾಲ್ಲೂಕುಗಳಲ್ಲಿ ಮಳೆ ಬೀಳದೆ ಗಂಭೀರ ಪರಿಸ್ಥಿತಿ ಇದ್ದು, ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕು. ಸರಕಾರಿ ಭೂಮಿಯನ್ನು ಉಳುಮೆ ಮಾಡುತ್ತಿರುವವರಿಗೆ ಪಟ್ಟಾ ನೀಡಬೇಕು; ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಇಲ್ಲದವರಿಗೆ ವಸತಿ ಕಲ್ಪಿಸಬೇಕು; ಜಿಲ್ಲೆಯಲ್ಲಿ ಮಳೆ ಬೀಳದ್ದರಿಂದ ರೈತರು ಕಂಗಾಲಾಗಿದ್ದಾರೆ. ಕಾರಣ ಬಡ ರೈತರ, ಕೃಷಿ ಕಾರ್ಮಿಕರ ಸಾಲಗಳನ್ನು ಮನ್ನಾ ಮಾಡಬೇಕು; ಕೆರೆ ಕುಂಟೆಗಳಲ್ಲಿ ನೀರಿಲ್ಲದೆ ಇರುವುದರಿಂದ ನೀರಿನ ತೆರಿಗೆಯನ್ನು ರದ್ದುಗೊಳಿಸಬೇಕು; ರೈತರ ಹೋರಾಟ ಸಮಯದಲ್ಲಿ ಹೂಡಿದ ಪೋಲಿಸ್ ಮೊಕದ್ದಮೆಗಳನ್ನು ಹಿಂತೆಗೆಯಬೇಕು...... ಇತ್ಯಾದಿ.

ಕೋಲಾರ :

11-10-82 ರಂದು ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಕೋಲಾರದಲ್ಲಿ ಬೃಹತ್ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಬಾಗೇಪಲ್ಲಿ, ಚಿಂತಾಮಣಿ, ಶ್ರೀನಿವಾಸಪುರ, ಕೋಲಾರ ತಾಲ್ಲೂಕು, ಮುಳಬಾಗಿಲು ಮುಂತಾದ ಕಡೆಗಳಿಂದ ರೈತರು ಆಗಮಿಸಿದ್ದರು. ಕಾಂ| ಸವರಿದಾಸ್, ಟಿ. ಎಸ್. ಮಣಿ ಇವರ ನೇತೃತ್ವದಲ್ಲಿ ಕೆ. ಜಿ. ಎಫ್. ನಿಂದ ಕಾರ್ಮಿಕರೂ ಆಗಮಿಸಿದ್ದರು.

ಕಾಂ| ಆರ್. ವೆಂಕಟ್ರಾಮಯ್ಯನವರು ಮನವಿ ಪತ್ರವನ್ನು ಸಭಿಕರಿಗೆ ಓದಿ ತಿಳಿಸಿದ ಮೇಲೆ ಜಿಲ್ಲಾಧಿಕಾರಿಗೆ ಸಲ್ಲಿಸಲಾಯಿತು.

ನಂತರ ಪಕ್ಕದ ಪಾರ್ಕಿನಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ| ಎಸ್. ಲಕ್ಷ್ಮಯ್ಯ, ಲಕ್ಷ್ಮಣರೆಡ್ಡಿ, ವೆಂಕಟ್ರಾಮಯ್ಯ, ನಾಗಿರೆಡ್ಡಿ, ಅಪ್ಪಸ್ವಾಮಿರೆಡ್ಡಿ ಮೊದಲಾದವರು ಮಾತನಾಡಿದರು. ಕೆ.ಜಿ.ಎಫ್.ನ ಸಂಗಾತಿ ಕಾಂ| ಆರೋಕ್ಯದಾಸರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಬಿಜಾಪುರ :

ಅಕ್ಟೋಬರ್ 11 ರಂದು ಬಿಜಾಪುರದಲ್ಲಿ ರೈತರ ಭಾರೀ ಮೆರವಣಿಗೆ ನಡೆಯಿತು. ರೈತ ಸಂಘದ ಕಾರ್ಯಾಲಯದಿಂದ ಮಧ್ಯಾಹ್ನ ಪ್ರಾರಂಭವಾದ ಮೆರವಣಿಗೆ ನಗರದ ಮುಖ್ಯ ಬೀದಿಗಳಲ್ಲಿ ನಡೆದು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿತು. ನಾಯಕತ್ವವನ್ನು ಕಾಂ| ಭೀಮಶಿ ಕಲಾದಗಿ ಮತ್ತಿತರರು ನೀಡಿದ್ದರು.

ಕಾಂ| ಭೀಮಶಿ ಕಲಾದಗಿ, ಸಿ. ಬಿ. ಮಣ್ಣೂರು, ಎ.ಎಚ್.ಹೊನ್ನುಟಗಿ, ವ್ಹಿ.ಎಮ್.ಸೊನ್ನದ, ಜಕ್ರಿಯಾಸಾಬ್ ಕಾಲೇಬಾಗ್ ಇವರನ್ನೊಳಗೊಂಡ ನಿಯೋಗವು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿತು.

ಮನವಿಯ ಮುಖ್ಯಾಂಶಗಳು :

ಸರಕಾರದ ಹೆಚ್ಚುವರಿ ಭೂಮಿಯನ್ನು ಭೂಹೀನ ರೈತರಿಗೆ ಮಂಜೂರು ಮಾಡಬೇಕು; ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್, ರಸ್ತೆ, ಸೌಕರ್ಯ, ಶಾಲಾ ಕಟ್ಟಡ ಒದಗಿಸಬೇಕು; ಜಿಲ್ಲೆಯನ್ನು ಶಾಶ್ವತ ಬರಗಾಲ ಪೀಡಿತ ಪ್ರದೇಶವೆಂದು ಸಾರಬೇಕು; ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಇಂಡಿ, ಸಿಂದಗಿ, ಬಸವನ ಬಾಗೇವಾಡಿ ತಾಲ್ಲೂಕುಗಳಿಗೆ ಕಾಲುವೆಗಳನ್ನು ತೀವ್ರವಾಗಿ ಪ್ರಾರಂಭಿಸಬೇಕು... ಇತ್ಯಾದಿ

ಮೈಸೂರು :

ಪ್ರಾಂತ ರೈತ ಸಂಘದ ಕರೆಯ ಮೇರೆಗೆ 11-10-82 ರಂದು ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಯಿತು ನಂತರ ಕಾಂ| ಉಗ್ರಪ್ಪನವರ ನೇತೃತ್ವದ ನಿಯೋಗವೊಂದು ಜಿಲ್ಲಾಧಿಕಾರಿಗಳ ಗೈರು ಹಾಜರಿಯಲ್ಲಿ ಅವರ ಆಪ್ತ

(7ನೇ ಪುಟ ನೋಡಿ)

ನನ್ನ ಭೂಗತ ಜೀವನದ ದಿನಗಳು

(3ನೇ ಪುಟದಿಂದ)

ಹಿಂತಿರುಗಿ ನೋಡಿದೆ. ವಿಷ್ಣು ಭಾರತೀಯನ್ ಬಳಿ ನಿಂತಿದ್ದ ಪೋಲೀಸರು ಗುಂಡು ಹಾರಿಸುತ್ತಿದ್ದರು. ನಾನು ತಕ್ಷಣ ಆ ಕಡೆ ಓಡಿದೆ. ನನ್ನನ್ನು ನೋಡಿ ಇತರರೂ ನನ್ನ ಹಿಂದೆ ಓಡಿ ಬಂದರು. ಸುತ್ತುವರಿದ ಜನರು ಕಲ್ಲು ತೂರಲಾರಂಭಿಸಿದರು. ಕಲ್ಲುಗಳು ಬಡಿಯಲಾರಂಭಿಸಿದ್ದರಿಂದ ಮ್ಯಾಜಿಸ್ಟ್ರೇಟ್ ಮತ್ತು ಪೋಲೀಸರು ಹಿಂದೆ ಓಡಿ ವ್ಯಾನಿನೊಳಕ್ಕೆ ಸೇರಿಕೊಂಡರು. ವ್ಯಾನು ದೂರ ಹೋದ ಮೇಲೆ ನಾನು ಸುತ್ತ ಕಣ್ಣು ಹಾಯಿಸಿದಾಗ ರಕ್ತದಿಂದ ಒದ್ದೆಯಾದ ಇನ್‌ಸ್ಪೆಕ್ಟರ್ ಕುಟ್ಟಿ ಕೃಷ್ಣ ಮೆನನ್ . ಗೋಡೆಯೊಂದಕ್ಕೆ ಒರಗಿ ನಿಂತಿರುವುದು ಕಂಡು ಬಂದಿತು. ಹಿಂಸೆ ಕೊಡುವುದರಲ್ಲಿ ಕುಟ್ಟಿ ಕೃಷ್ಣ ಮೆನನ್ ಕುಪ್ರಸಿದ್ಧನಾಗಿದ್ದನು. ಯಾರೋ ವಿಷ್ಣು ಭಾರತೀಯರನ್ನು ಕೆಳಗೆ ಜಗ್ಗಿದರು. ಅವರು ಕೆಳಗೆ ಬಿದ್ದರು. ತಕ್ಷಣ ಕಲ್ಲುಗಳು ತೂರಿ ಬಂದು ಕುಟ್ಟಿ ಕೃಷ್ಣಮೆನನ್‌ಗೆ ಬಡಿದವು. ಅವನು ನಿಸ್ಸಹಾಯಕನಾಗಿ ಕುಸಿದುಬಿದ್ದನು. ತಕ್ಷಣ ಯಾರೋ ಬಂದು ಹೇಳಿದರು— "ಪೋಲೀಸ್ ಕಾನ್‌ಸ್ಟೇಬಲ್ ಗೋಪಾಲನ್ ನಾಯರ್ ಕುಸಿದು ಬಿದ್ದಿದ್ದಾನೆ. ಸತ್ತೇ ಹೋಗಿರುವ ಹಾಗೆ ಕಾಣುತ್ತಿದ್ದಾನೆ." ಜನರ ಗುಂಪನ್ನು ಸರಿಸಿ ನಾನು ಕುಟ್ಟಿ ಕೃಷ್ಣಮೆನನ್ ಬಳಿ ಹೋಗಲು ಪ್ರಯತ್ನಿಸಿದೆ. ಆದರೆ ಸಾಧ್ಯವಾಗಲಿಲ್ಲ. ಜನರು "ಅವನಿಗೆ ಹೀಗೇ ಆಗಬೇಕಿತ್ತು" ಎಂದು ಕೋಪದಿಂದ ಹೇಳುತ್ತಿದ್ದರು— "ಅವನು ಸತ್ತಿದ್ದಾನೆ. ಇನ್ನು ಇಲ್ಲಿ ಯಾರೂ ಉಳಿಯಬಾರದು. ನೀವೆಲ್ಲಾ ಈ ಕೂಡಲೇ ಜಾಗಬಿಟ್ಟು ಹೊರಡಬೇಕು" ಎಂದು ಕೆ.ಪಿ.ಆರ್. ಹೇಳಿದರು.

ಆ ವೇಳೆಗಾಗಲೇ ಕತ್ತಲಾಗಿತ್ತು. ಅಂಗಡಿಗಳನ್ನು ಮುಚ್ಚಿ ಅಂಗಡಿಕಾರರೆಲ್ಲಾ ಹೊರಟು ಹೋದರು,ಎಲ್ಲಿಯೂ ಬೆಳಕೇ ಕಾಣುತ್ತಿರಲಿಲ್ಲ. "ಹೋಗಿ ! ಕೂಡಲೇ ನಿಮ್ಮ ಮನೆಗಳಿಗೆ ಹಿಂದಿರುಗಿ" ಎಂದು ಹೇಳಿ ನಾನು ಪ್ರತಿಯೊಬ್ಬರ ಮನವೊಲಿಸಿ ಕಳುಹಿಸಲು ಪ್ರಯತ್ನಿಸಿದೆ. ಕೆ. ಪಿ. ಆರ್., ಮಾಸ್ತರ್ ಮತ್ತಿತರರೂ ಸಹ ಈ ಪ್ರಯತ್ನದಲ್ಲಿದ್ದರು. ಇಪ್ಪತ್ತು ನಿಮಿಷಗಳಲ್ಲಿ ಪೋಲೀಸ್ ಇನ್‌ಸ್ಪೆಕ್ಟರ್‌ನ ಸಾವಿನ ಸುದ್ದಿ ಹರಡಿ ಗುಂಪು ಚದುರಿತು. ಹೆಡ್‌ಕಾನ್‌ಸ್ಟೇಬಲ್ ಗೋಪಾಲ್ ನಾಯರ್ ಮತ್ತು ಇನ್‌ಸ್ಪೆಕ್ಟರ್ ಕುಟ್ಟಿಕೃಷ್ಣಮೆನನ್ ಇಬ್ಬರೂ ಎರಡು ಸ್ಥಳಗಳಲ್ಲಿ ಬಿದ್ದಿದ್ದರು. ಭಾರತೀಯನ್ ಸಹ ಜನಜಂಗುಳಿಯ ನೂಕಾಟದಲ್ಲಿ ಸಿಕ್ಕಿ ಕೆಳಗೆ ಬಿದ್ದಿದ್ದರು. ನಾವು ನೋಡುತ್ತಿದ್ದಂತೆಯೇ ಅವರು ಎದ್ದು ಓಡಾಡಲಾರಂಭಿಸಿದರು. ಭಾರತೀಯನ್‌ರವರದು ತಮ್ಮದೇ ಆದ ರೀತಿ ನೀತಿಗಳು ಎಂದು ಕೆ.ಪಿ.ಆರ್. ನಮಗೆ ಹೇಳಿದರು.

ಇನ್ನು ಅಲ್ಲಿ ಸುಳಿದಾಡುವುದೇ ಅಪಾಯಕಾರಿಯಾಗಿತ್ತು. ಪೋಲೀಸ್ ದಳವು ಯಾವುದೇ ಕ್ಷಣದಲ್ಲಿ ಬರುವ ನಿರೀಕ್ಷೆಯಿತ್ತು. ಅವರ ಕೈಗೆ ಸಿಕ್ಕಿದವರು ಯಾರಾದರೂ ಒಳ್ಳೆಯ ಒಡೆತ ತಿನ್ನಬೇಕಾಗುತ್ತಿತ್ತು.

"ನೀನು ಪೂರ್ವಕ್ಕೆ ಹೋಗು, ಇಂತಹ ಪರಿಸ್ಥಿತಿಯಲ್ಲಿ ಒಂಟಿಯಾಗಿರುವುದೇ . ಪಾರಾಗಲು ಇರುವ ಅತ್ಯಂತ ಸೂಕ್ತ ಮಾರ್ಗ" ಎಂದು ಕೆ. ಪಿ. ಆರ್. ಬಂದು ನನಗೆ ಹೇಳಿದರು. ನಾನು ಪೂರ್ವ ದಿಕ್ಕಿನೆಡೆಗೆ ವೇಗವಾಗಿ ನಡೆಯಲಾರಂಭಿಸಿದೆ. ಆ ರಸ್ತೆಯ ಮೂಲಕ ನಾನು ಕರ್ನಾಟಕ ರಾಜ್ಯವನ್ನು ತಲುಪಬಹುದೆಂದು ನನಗೆ ತಿಳಿದಿತ್ತು. ನಾನು ಕತ್ತಲ ಗರ್ಭವನ್ನು ಸೀಳಿ ಹೆದ್ದಾರಿಗಳನ್ನು ತಪ್ಪಿಸಿ ಕಾಲುದಾರಿಗಳಲ್ಲೇ ನಡೆಯುತ್ತಿದ್ದೆ. ಇಲ್ಲಿಂದ ನನ್ನ ಭೂಗತ ಜೀವನದ ದಿನಗಳು ಪ್ರಾರಂಭವಾಗುತ್ತವೆ.

(ಮುಂದುವರಿಯುವುದು)

ಯಶಸ್ವೀ ಕಾರ್ಯಕ್ರಮ

(6ನೇ ಪುಟದಿಂದ)

ಕಾರ್ಯದರ್ಶಿಗೆ ಮನವಿಪತ್ರ ಸಲ್ಲಿಸಿತು. ಮನವಿಯ ಮುಖ್ಯಾಂಶಗಳು :

ವರುಣಾ ನಾಲಾ ಯೋಜನೆಯನ್ನು ಶೀಘ್ರ ಪೂರೈಸಬೇಕು; ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ ಪರಿಹಾರ ಕಾರ್ಯ ಕೈಗೊಳ್ಳಬೇಕು; ತಂಬಾಕು ಮತ್ತು ಕಬ್ಬು ಬೆಳೆಗಾರರಿಗೆ ಆಗುತ್ತಿರುವ ನಷ್ಟವನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕು; ಅರಣ್ಯ ಮತ್ತು ಅಬ್ಕಾರಿ ಇಲಾಖೆಯವರು, ಸಾಗುವಳಿ ರೈತರಿಗೆ ಕೊಡುತ್ತಿರುವ ಕಿರುಕುಳ ತಪ್ಪಿಸಬೇಕು...... ಇತ್ಯಾದಿ.

ಈ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ 30-9-82 ರಂದು ಹುಣಸೂರಿನಲ್ಲಿ ಸಿದ್ಧತಾ ಸಭೆಯನ್ನು ನಡೆಸಲಾಗಿತ್ತು. ಅಂದು ಕೆಲವೊಂದು ಬೇಡಿಕೆಗಳನ್ನು ಮುಂದಿಟ್ಟು ತಹಶೀಲ್ದಾರರ ಕಚೇರಿ ಎದರು ಧರಣಾ ಸತ್ಯಾಗ್ರಹ ಕೈಗೊಳ್ಳಲಾಗಿತ್ತು. ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ| ಎಂ. ಎಸ್. ಉಗ್ರಪ್ಪ ಮತ್ತು ಕಾಂ| ಪಿ. ಜಗನ್ನಾಥ ಅವರು ಮಾತನಾಡಿ 11-10-82ರ ಕಾರ್ಯಕ್ರಮ ಯಶಸ್ವಿಗೊಳಿಸಲು ಮನವಿ ಮಾಡಿದ್ದರು.

ಗುಲ್ಬರ್ಗಾ :

11-10-82 ರಂದು ಜಿಲ್ಲಾ ರೈತ ಸಂಘದ ಆಶ್ರಯದಲ್ಲಿ ನಿಯೋಗವೊಂದು ಜಿಲ್ಲಾಧಿಕಾರಿಗಳಲ್ಲಿ ತೆರಳಿ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರ ಸಲ್ಲಿಸಿತು. ಕಾಂ| ಕಲ್ಲಪ್ಪ ಕಿರಣಗಿ ಮತ್ತಿತರರು ನೇತೃತ್ವ ವಹಿಸಿದ್ದರು.

ಮನವಿಯ ಮುಖ್ಯಾಂಶಗಳು :

ರೈತರ ಕೃಷಿ ಉತ್ಪನ್ನಗಳಿಗೆ ಯೋಗ್ಯ ಲಾಭದಾಯಕ ಬೆಲೆಗಳನ್ನು ನೀಡುವುದಲ್ಲದೇ, ಕೃಷಿ ಉತ್ಪನ್ನಗಳ ಸಗಟು ವ್ಯಾಪಾರವನ್ನು ಸರಕಾರವೇ ವಹಿಸಬೇಕು; ಜಿಲ್ಲೆಯಲ್ಲಿನ ಸರಕಾರಿ ಬಂಜರು ಭೂಮಿ, ಹೆಚ್ಚುವರಿ ಭೂಮಿಯನ್ನು ತಕ್ಷಣವೇ ಭೂಹೀನರಿಗೆ ನೀಡಬೇಕು; ಭೂ ನ್ಯಾಯ ಮಂಡಳಿಯಲ್ಲಿ ನಡೆದ ಭ್ರಷ್ಟಾಚಾರದ ತನಿಖೆಯಾಗಿ, ಭೂ ಹಂಚಿಕೆಯನ್ನು ವಿಮರ್ಶಿಸಿ ಸೂಕ್ತ ಪರಿಹಾರ ನೀಡಬೇಕು; ಜಿಲ್ಲೆಯಲ್ಲಿ ಶಾಶ್ವತ ಪರಿಹಾರ ಕ್ರಮಗಳನ್ನು ರೂಪಿಸಬೇಕು; ಕೃಷ್ಣಾ ಮೇಲ್ದಂಡೆ ಮತ್ತಿತರ ನೀರಾವರಿ ಯೋಜನೆಗಳನ್ನು ಕೂಡಲೇ ಪೂರ್ತಿಗೊಳಿಸಬೇಕು; ಪ್ರತಿ ಹಳ್ಳಿಗಳಿಗೆ ಪ್ರಾಥಮಿಕ ಸೌಲಭ್ಯ ನೀಡಬೇಕು; ಕೃಷಿ ಕಾರ್ಮಿಕರಿಗೆ ಜೀವನಾವಶ್ಯಕ ಕೂಲಿ, ಕೆಲಸದ ಭದ್ರತೆ ಮತ್ತು ನಿವೃತ್ತಿ ವೇತನ ನೀಡಬೇಕು...... ಇತ್ಯಾದಿ.

○

ಹರಿಹರ ಪಾಲಿಫೈಬರ್ಸ್ :

ಅನಿರ್ದಿಷ್ಟ ಮುಷ್ಕರ ಪ್ರಾರಂಭ

ಕಾರ್ಮಿಕ ಪ್ರತಿನಿಧಿಗಳು ಮತ್ತು ಆಡಳಿತ ವರ್ಗದ ನಡುವೆ ಡಿ.ಎಲ್.ಸಿ. ಸಿದ್ದಯ್ಯನವರ ಸಮ್ಮುಖದಲ್ಲಿ ನಡೆದ ಮಾತುಕತೆಗಳು ಯಶಸ್ವಿಯಾಗದೆ, ಮುಂದಿನ ಹೆಜ್ಜೆಯಾಗ್ಲೇಬರ್ ಕಮೀಷನರರ ಸಮ್ಮುಖದಲ್ಲಿ ಮಾತುಕತೆ ಮಾಡುವಂತೆಯೂ, ಅಲ್ಲಿಯವರೆಗೆ ಈಗಿನ ಪರಿಸ್ಥಿತಿಯನ್ನು ಕಾಪಾಡಿಕೊಂಡು ಇರುವಂತೆ ಡಿ. ಎಲ್. ಸಿ. ಸಲಹೆ ನೀಡಿದ್ದರು. (ವಿವರ 17-10-82ರ ಐಕ್ಯರಂಗ).

ಡಿ. ಎಲ್. ಸಿ. ಯವರ ಸಲಹೆಯ ಕುರಿತು ಸಂಘದ ಆಫೀಸಿನಲ್ಲಿ ಕಾರ್ಯಕಾರಿ ಸಮಿತಿ ಚರ್ಚಿಸುತ್ತಿದ್ದಂತೇ, ಈಗಾಗಲೇ ಕೊಡಮಾಡಬಯಸಿದ 120 ರೂ. ಸಂಬಳ ಹೆಚ್ಚಳ ಮತ್ತು ಬೋನಸ್ಸನ್ನೂ ವಾಪಸ್ ಪಡೆದಿರುವುದಾಗಿ ಆಡಳಿತವರ್ಗ ಲಿಖಿತದಲ್ಲಿ ತಿಳಿಸಿತು. ಆಡಳಿತ ವರ್ಗದ ದುರಹಂಕಾರದ ಧೋರಣೆಯನ್ನು ಉಗ್ರವಾಗಿ ಖಂಡಿಸಿದ ಕಾರ್ಯಕಾರಿ ಸಮಿತಿಯು, ಅನಿರ್ದಿಷ್ಟ ಅವಧಿಯ ಮುಷ್ಕರ ನಡೆಸುವ ತೀರ್ಮಾನ ಕೈಗೊಂಡಿತು. 18-10-82ರಿಂದ ಮುಷ್ಕರ ಪ್ರಾರಂಭವಾಗಿದೆ.

ಅಂದು (ಅ. 18 ಸಾಯಂಕಾಲ) ಪಾಲಿಫೈಬರ್ಸ್ ಕಾರ್ಮಿಕರು ನಗರದ ಮುಖ್ಯ ಬೀದಿಗಳಲ್ಲೆಲ್ಲ ಮೆರವಣಿಗೆ ಹೊರಡಿಸಿ ಗಾಂಧೀ ಮೈದಾನದಲ್ಲಿ ಸಭೆ ಸೇರಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಸಂಘದ ಅಧ್ಯಕ್ಷ ಕಾಂ| ವಿ.ಜೆ. ಕೆ. ನಾಯರ್, ಮುಷ್ಕರಕ್ಕೆ ಕಾರಣವಾದ ಆಡಳಿತ ವರ್ಗದ ಧೋರಣೆಯನ್ನು ವಿವರಿಸಿದರು. ಈ ಹಿಂದೆ ಶೇ. 42.25 ರಷ್ಟು ಬೋನಸ್ಸು ನೀಡಿದ ಆಡಳಿತ ವರ್ಗ ಈ ವರ್ಷ ಅದನ್ನು ಕನಿಷ್ಟಕ್ಕೆ ಇಳಿಸುವ ಬೆದರಿಕೆ ಹಾಕಿದೆಯೆಂದು ತಿಳಿಸಿದ ಕಾಂ| ವಿ.ಜೆ. ಕೆ., ಈ ಗುತ್ತೇದಾರಿ ಸಂಸ್ಥೆಯ ವಿರುದ್ಧ ಐಕ್ಯ ಹೋರಾಟಕ್ಕೆ ಅನುವಾಗುವಂತೆ ಮುಂದಿನ ನವೆಂಬರ್‌ನಲ್ಲಿ ಗ್ವಾಲಿಯರ್ ರಿಯಾನ್ಸ್‌ನ ಎಲ್ಲ ಕಾರ್ಮಿಕ ಸಂಘಗಳ ಅಖಿಲ ಭಾರತ ಸಮ್ಮೇಳನ ನಡೆಸಲು ತೀರ್ಮಾನಿಸಿರುವುದನ್ನು ತಿಳಿಸಿದರು. ಸುಮುಖ ಒಪ್ಪಂದಕ್ಕೆ ಆಡಳಿತ ವರ್ಗ ಮುಂದೆ ಬರುವವರೆಗೆ ಮುಷ್ಕರ ಮುಂದುವರಿಸುವ ಅಚಲ ನಿರ್ಧಾರವನ್ನು ಕಾರ್ಮಿಕರು ವ್ಯಕ್ತಪಡಿಸಿದರು.

ಕೇಂದ್ರ ಸಮಿತಿಯ ವರದಿ:

(4ನೇ ಪುಟದಿಂದ)

ಸಂಸ್ಕರಿಸಿ ಮರಳಿ ಉಪಯೋಗಿಸಲು ಭಾರತಕ್ಕೆ ಇರುವ ಹಕ್ಕನ್ನು ಒತ್ತಿ ಹೇಳುವ ಮೂಲಕ ರೀಗನ್ ಆಡಳಿತೆಗೂ ಭಾರತ ಸರಕಾರಕ್ಕೂ ಇರುವ ಭಿನ್ನಾಭಿಪ್ರಾಯವನ್ನು ಬಹಿರಂಗವಾಗಿಯೇ ಸ್ಪಷ್ಟಪಡಿಸಿದ್ದಾರೆ. ಹಾಗಿದ್ದರೂ ಅಮೇರಿಕದ ಜೊತೆಗೆ ಅವೇಲೆ ಮಾಡಿಕೊಳ್ಳಲಾದ ಒಪ್ಪಂದವು ಭಾರತ ಈಗಾಗಲೇ ಪ್ರತಿಪಾದಿಸಿರುವ ಧೋರಣೆಗೆ ವ್ಯತಿರಿಕ್ತವಾಗಿದೆ. ನವಂಬರ್ 1981ರಲ್ಲಿ, ಅಂದರೆ ಕೆಲವೇ ತಿಂಗಳುಗಳ ಹಿಂದೆ ಮೂರನೇ ದೇಶವೊಂದರ ಮುಖಾಂತರ ತಾರಾಪುರಕ್ಕೆ ಇಂಧನ ಪೂರೈಕೆ ಮಾಡುವ ಅಮೇರಿಕದ ಸಲಹೆಯನ್ನು ಭಾರತ ಸರಕಾರವು ತಿರಸ್ಕರಿಸಿತ್ತು. ಪ್ರಧಾನಿ ತನ್ನ ಅಮೇರಿಕಾ ಭೇಟಿಯ ವೇಳೆ ಈ ನಿಲುವೆಯನ್ನು ಸಂಪೂರ್ಣ ಕೈಬಿಟ್ಟಿದ್ದಾರೆ. ಫ್ರಾನ್ಸಿನಿಂದ ಇಂಧನವನ್ನು ಕೊಂಡುಕೊಳ್ಳಲು ಮಾಡಿಕೊಳ್ಳಲಾದ ಒಪ್ಪಂದದಿಂದಾಗಿ ನಮ್ಮ ದೇಶದ ಅಣು ಸ್ಥಾವರಗಳ ಪರಿಶೀಲನೆ ಮತ್ತು ಸಂರಕ್ಷಣಾ ಕ್ರಮಗಳ ಕುರಿತು ನಾವು ಈವರೆಗೂ ತಳೆದಿದ್ದ ಧೋರಣೆಯನ್ನು ಸಂಪೂರ್ಣವಾಗಿ ಕೈಬಿಟ್ಟಂತಾಗಿದೆ.

ಭಾರತವು ಈ ರೀತಿ ರಾಜಿಮಾಡಿಕೊಳ್ಳಲು ಒಪ್ಪಿಕೊಂಡದ್ದು ಯಾಕೆ ಎನ್ನುವುದು ಮುಖ್ಯವಾದ ಪ್ರಶ್ನೆ. ಇದಕ್ಕೆ ಉತ್ತರ ಇಷ್ಟೇ ಬಿಗಡಾಯಿಸುತ್ತಿರುವ ಆರ್ಥಿಕ ಮುಗ್ಗಟ್ಟಿನ ಹಿನ್ನೆಲೆಯಲ್ಲಿ ಭಾರತದ ಆಳುವ ವರ್ಗಗಳ ಪಾಲಿಗೆ ಬಹುರಾಷ್ಟ್ರೀಯ ಖಾಸಗಿ ಸಂಸ್ಥೆಗಳು ಮತ್ತು ಅಮೇರಿಕಾ ಹಾಗೂ ಇತರ ಶ್ರೀಮಂತ ಬಂಡವಾಳಶಾಹಿ ರಾಷ್ಟ್ರಗಳ ಸರಕಾರಗಳ ಮೇಲೆ ಅವಲಂಬಿಸಿಕೊಂಡಿರುವದು ಅನಿವಾರ್ಯವಾಗಿಬಿಟ್ಟಿದೆ.

ಪ್ರಧಾನಿಯವರು ತನ್ನ ಅಮೇರಿಕಾ ಸಂದರ್ಶನದ ಹೆಚ್ಚಿನ ವೇಳೆಯನ್ನು ಖಾಸಗಿ ಉದ್ಯಮಿಗಳ ಭೇಟಿಗಾಗಿ ಬಳಸಿಕೊಂಡಿರುವುದನ್ನೂ ಭಾರತಕ್ಕೆ ಸಹಾಯ ನೀಡಬೇಕೆಂದು ಈ ಖಾಸಗಿ ವಾಣಿಜ್ಯೋದ್ಯಮಿಗಳಿಗೆ ಅವರು ಬಹಿರಂಗವಾಗಿ ವಿನಂತಿ ಮಾಡಿಕೊಂಡಿರುವುದನ್ನು ಇಲ್ಲಿ ಗಮನಿಸಬೇಕು. ಇಂದಿರಾ ಗಾಂಧಿ ಮತ್ತು ಅವರ ಸರಕಾರವು ದೇಶದಲ್ಲಿ ನಿರ್ಮಿಸಬೇಕಾಗಿರುವ "ಸೂಕ್ತ ವಾತಾವರಣ"ದ ಮೇಲೆಯೇ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಸಾಲದ ಮುಂದಿನ ಕಂತುಗಳು ಮತ್ತು ಇತರ ಅಂತರರಾಷ್ಟ್ರೀಯ ಸಂಸ್ಥೆಗಳ 'ನೆರವು' ದೊರೆಯುವುದು ಅವಲಂಬಿತವಾಗಿದೆ. ಪ್ರಾಯಶಃ ಇಂತಹ "ಸೂಕ್ತ ವಾತಾವರಣ"ವನ್ನು ನಿರ್ಮಿಸುವ ಉದ್ದೇಶದಿಂದಲೇ ತಾರಾಪುರ ಇಂಧನದ ಪ್ರಶ್ನೆಯಲ್ಲಿ ಶರಣಾಗತಿಯನ್ನು ಒಪ್ಪಿಕೊಳ್ಳಲಾಗಿದೆ.

(ಮುಂದುವರಿಯುವುದು)

ಪರಿಸರ

● 1981 ರಲ್ಲಿ 1189 ವ್ಯಕ್ತಿಗಳನ್ನು ಎನ್.ಎಸ್.ಎ. ಪ್ರಕಾರ ಬಂಧಿಸಲಾಯ್ತು. 1982ರಲ್ಲಿ ಮೊದಲ 5 ವಾರಗಳಲ್ಲೇ ಸಂಖ್ಯೆ 143 ಆಗಿತ್ತು. ಬಂಧಿತರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ಬುದ್ಧಿ ಜೀವಿಗಳು. ಉತ್ತರ ಪ್ರದೇಶ ಒಂದರಲ್ಲೇ 1/3 ರಷ್ಟು ಬಂಧಿತರಿದ್ದಾರೆ. ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಮಾತ್ರ ಎನ್.ಎಸ್.ಎ. ಬಂಧಿತರಿಲ್ಲ. ಎಡಪಂಥೀಯ ಸರ್ಕಾರಗಳು ಎನ್. ಎಸ್. ಎ. ಇಲ್ಲದೆ ಆಳ್ವಿಕೆ ನಡೆಸಲು ಸಾಧ್ಯವಿದ್ದರೆ ಕಾಂಗ್ರೆಸ್ (ಐ) ಸರಕಾರಗಳಿಗೇಕೆ ಸಾಧ್ಯವಾಗುವುದಿಲ್ಲ ?

—ಕುಲದೀಪ್ ನಾಯರ್. ಸಂಡೇಯಲ್ಲಿ

● ಪಾಟ್ನಾ ಸಹಕಾರಿ ನಗರ ಬ್ಯಾಂಕ್‌ನ ಅಧ್ಯಕ್ಷನಾಗಿದ್ದ ನವಲ್ ಕಿಶೋರ್ ಸಿನ್ಹಾನನ್ನು ಕೆಲವು ಅಪಾದನೆಗಳಿಂದ ಪಾರು ಮಾಡಲು ಸುಪ್ರೀಂ ಕೋರ್ಟ್ ಶಿಕ್ಷೆ ತಪ್ಪಿಸಲು 1975ರಲ್ಲಿ ಬಿಹಾರ್ ಮುಖ್ಯ ಮಂತ್ರಿ ಜಗನ್ನಾಥ್ ಮಿಶ್ರ ಒಂದು ಆಜ್ಞೆಗೆ ನಕಲಿ ಸಹಿ ಹಾಕಿದ್ದಾರೆಂದು ಸುಪ್ರೀಂ ಕೋರ್ಟಿಗೆ ಇಂದು ತಿಳಿಸಲಾಯಿತು.

—ಯು. ಎನ್. ಐ. ಮತ್ತು ಪಿ.ಟಿ.ಐ. ಅ. 6.

● ಗಾಂಧಿ ನೆಹ್ರೂಗಳ ಕಾಂಗ್ರೆಸ್ ಪಕ್ಷವನ್ನು ಗೂಂಡಾಗಳು, ಕಳ್ಳಸಾಗಾಣಿಕೆದಾರರುಗಳ ಪಕ್ಷವಾಗಿ ಪರಿವರ್ತಿಸಲಾಗಿದೆ ಈಗ.

—ಮೇನಕಾ ಗಾಂಧಿ (ಅಮೇಥಿ ಭಾಷಣದಲ್ಲಿ)

○ ಜಗತ್ತಿನಲ್ಲಿ ಪ್ರತಿದಿನ ಕಾರ್ಖಾನೆ, ಉದ್ಯಮ ಮತ್ತು ಆಫೀಸುಗಳಲ್ಲಿ ಕೆಲಸಕ್ಕೆ ಸಂಬಂಧಿಸಿದಂತೆ ಸುಮಾರು 10000 ಅಪಘಾತಗಳು ಸಂಭವಿಸುತ್ತವೆ. ಮೂರನೇ ಜಗತ್ತಿನ ದೇಶಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಇಂತಹ ಅಪಘಾತಗಳು ಇಮ್ಮಡಿ, ಮುಮ್ಮಡಿಯಾಗುತ್ತಿವೆ. ಎಂದು ಐ.ಎಲ್.ಓ. ನಡೆಸಿದ ಅಧ್ಯಯನಗಳಿಂದ ತಿಳಿದು ಬಂದಿದೆ.

—ಪಿ.ಎಸ್.ಎ. ಅ. 7

○ ವಿಶ್ವವು ಇಂದು ಪ್ರತಿನಿಮಿಷಕ್ಕೆ ಹತ್ತು ಲಕ್ಷ ಡಾಲರುಗಳಿಗೂ ಹೆಚ್ಚು ಹಣವನ್ನು ರಕ್ಷಣಾ ಪಡೆಯ ಮೇಲೆ ಖರ್ಚು ಮಾಡುತ್ತಿದೆ ಎಂದು ವಾಷಿಂಗ್‌ಟನ್‌ನಲ್ಲಿ ಒಂದು ತಂಡ ಹೊರಡಿಸಿರುವ ಕರಪತ್ರದಲ್ಲಿ ತಿಳಿಸಲಾಗಿದೆ. ಸೇನಾಪಡೆ ಮತ್ತು ಶಸ್ತ್ರಾಸ್ತ್ರಗಳ ಮೇಲೆ ಮಾಡುವ ಖರ್ಚು ಒಂದು ದಿನಕ್ಕೆ ಅರುನೂರು ಕೋಟಿ ಡಾಲರ್ ಅಥವಾ ಪ್ರತಿ ಸೈನಿಕನಿಗೆ 19300 ಡಾಲರ್ ಆಗುತ್ತದೆ ಎಂದು ಹೇಳಿರುವ ಅವರು ಒಂದು ಮಗುವಿನ ಶಿಕ್ಷಣಕ್ಕೆ ಮಾಡುತ್ತಿರುವ ಖರ್ಚು ಕೇವಲ 380 ಡಾಲರ್ ಎಂದು ತಿಳಿಸಿದ್ದಾರೆ.

—ಎ. ಪಿ. ಅ. 6

● "...ಕಮ್ಯೂನಿಸ್ಟ್ ಪಕ್ಷಗಳು ಕನ್ನಡ ವಿರೋಧಿ ನಿಲುವನ್ನು ತಳೆದಿವೆ ಎನ್ನುವುದಾದರೆ ಹಾಗೆ ಅಪ್ರಿಯವಾದುದ್ದನ್ನು ಅವು ಏಕೆ ಹೇಳುತ್ತಿವೆ ? ತಮ್ಮ ಅಥವಾ ತಮ್ಮ ಪಕ್ಷದ, ಪತ್ರಿಕೆಯ ಜನಪ್ರಿಯತೆಯನ್ನು ಕಳೆದುಕೊಳ್ಳಬಾರದೆಂಬ ತಂತ್ರವನ್ನು ಅವುಗಳ ನೇತಾರರು ಅನುಸರಿಸುವದಾಗಿದ್ದರೆ, ಕಣ್ಣು ಮುಚ್ಚಿಕೊಂಡು ಗೋಕಾಕ್ ವರದಿಯನ್ನು ಅಂಗೀಕರಿಸಬೇಕೆಂದು ಅವು ಒತ್ತಾಯ ಮಾಡುತ್ತಿದ್ದವು. ಆದರೆ ಅದಕ್ಕೆ ಬದಲಾಗಿ ಅಲ್ಪಸಂಖ್ಯಾತರು ಒತ್ತಾಯದಡಿ ನರಳಬಾರದೆಂಬ ನಿಲೆಗೆ ಅವರು ಅಂಟಿಕೊಂಡಿರುವುದು ಹೆಚ್ಚು ಆರೋಗ್ಯಕರವಾಗಿದೆ ಎಂಬುದು ಚರಿತ್ರೆಯ ಮುಂದಿನ ಬೆಳವಣಿಗೆಯಲ್ಲಿ ಕಂಡುಕೊಳ್ಳಬಹುದಾದ ಸತ್ಯವಾಗಿದೆ...."

—ಸಿ. ವೀರಣ್ಣನವರ 'ಒಂದು ಐತಿಹಾಸಿಕ ಪುನರ್‌ರಚನೆ' (ಪ್ರಜಾವಾಣಿ 12-10-82ರ ಪುರವಣಿ) ಎಂಬ ಲೇಖನದಿಂದ

ರಾಜ್ಯದಾದ್ಯಂತ ಮತಪ್ರದರ್ಶನ

(1ನೇ ಪುಟದಿಂದ)

ಯನ್ನು ಸಿ. ಪಿ. ಐ. (ಎಂ) ಜಿಲ್ಲಾ ಕಾರ್ಯದರ್ಶಿ ಕಾಂ| ಕೆ. ಆರ್. ಶ್ರೀಯಾನ್ ವಹಿಸಿದ್ದರು.

ಆರಂಭದಲ್ಲಿ ಸಿ.ಐ.ಟಿ.ಯು., ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ| ಮುಹಸಬ್ಬ ಅವರು ಮಾತನಾಡಿ ಸಭೆಯ ಉದ್ದೇಶವನ್ನು ವಿವರಿಸಿದರು. ನಂತರ ಸಭೆಯನ್ನುದ್ದೇಶಿಸಿ ಕಾಂ| ಪಿ. ರಾಮ ಚಂದ್ರರಾವ್ ಅವರು ಮಾತನಾಡಿ ಗೂಂಡಾಗಿರಿ, ಕೊಲೆ ರಾಜಕೀಯವನ್ನು ಸಹಿಸಲಾಗದೆಂದು ಎಚ್ಚರಿಸಿದರು. ಕೂಡಲೇ ಕೊಲೆಪಾತಕಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಅವರು ಒತ್ತಾಯಿಸಿದರು.

ಕೊನೆಯಲ್ಲಿ ಕಾಂ| ಶ್ರೀಯಾನ್ ಮಾತನಾಡಿ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಈ ಕೊಲೆಯ ಘಟನೆಯನ್ನು ಖಂಡಿಸಲು ಮನವಿ ಮಾಡಿದರು.

ಬಿಜಾಪುರ :

.ಕಾಂ| ಆರೋಕ್ಯದಾಸ್ ಅವರ ಕೊಲೆಯನ್ನು ಖಂಡಿಸಿ, ಕೊಲೆಗೆ ಸಂಬಂಧಪಟ್ಟವರನ್ನು ಬಂಧಿಸಿ ಶಿಕ್ಷೆಗೊಳಪಡಿಸಬೇಕೆಂದೂ, ಗೂಂಡಾಗಳಿಗೆ ಪ್ರೋತ್ಸಾಹ ನೀಡುವ ಪೋಲಿಸರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದೂ ಒತ್ತಾಯಿಸುವ ಮನವಿಯನ್ನು ಸಿ. ಪಿ. ಐ. (ಎಂ), ಸಿ.ಐ.ಟಿ.ಯು., ಜಿಲ್ಲಾ ರೈತ ಸಂಘ, ವಿದ್ಯಾರ್ಥಿ ಫೆಡರೇಷನ್‌ನ ಪರವಾಗಿ 18-10-82 ರಂದು ಜಿಲ್ಲಾಧಿಕಾರಿಯವರ ಮೂಲಕ ಮುಖ್ಯ ಮಂತ್ರಿಗಳಿಗೆ ಕಳಿಸಲಾಯಿತು.

ಗಾಂಧೀ ಚೌಕದಿಂದ ಆರಂಭವಾದ ಮೆರವಣಿಗೆಯಲ್ಲಿ ನಗರಸಭೆ ಕಾರ್ಮಿಕರೂ, ರೈತರೂ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ಘೋಷಣೆಕೂಗುತ್ತಾ ಜಿಲ್ಲಾಧಿಕಾರಿಯವರ ಕಚೇರಿಗೆ ತೆರಳಿದರು. ಮನವಿ ಸಲ್ಲಿಸಿದ ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ| ಎನ್. ಕೆ. ಉಪಾಧ್ಯಾಯ, ಭೀಮಶಿ ಕಲಾದಗಿ, ಜಕ್ರಿಯಸಾಬ್ ಕಾಲೇಬಾಗ್ ಮೊದಲಾದವರು ಮಾತನಾಡಿದರು.

ಸಕಲೇಶಪುರ :

18-10-82 ರಂದು ಸಿ. ಪಿ. ಐ. (ಎಂ) ಮತ್ತು ಸಿ.ಐ.ಟಿ.ಯು. ರಾಜ್ಯ ಸಮಿತಿಗಳ ಕರೆಯಮೇರೆಗೆ ಕೆ.ಜಿ.ಎಫ್. ನಲ್ಲಿ ಭಾರತ್ ಗೋಲ್ಡ್ ಮೈನ್ಸ್ ಎಂಪ್ಲಾಯೀಸ್ ಯೂನಿಯನ್‌ನ ಮೇಲೆ ಕೆ. ಜಿ. ಎಫ್. ನ ಗೂಂಡಾ ಶಾಸಕ ಸಿ. ಎಂ. ಆರ್ಮುಗಂ ನಾಯಕತ್ವದಲ್ಲಿ ಕಡೆದ ದಾಳಿ, ನಂತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಕಾಂ| ಆರೋಕ್ಯದಾಸರ ಕಗ್ಗೊಲೆಯ ವಿರುದ್ಧ ಪೋಲಿಸರ ನಿಷ್ಕ್ರಿಯತೆಯ ವಿರುದ್ಧ ಕರ್ನಾಟಕ ತೋಟ ಕಾರ್ಮಿಕ ಸಂಘದ ಆಶ್ರಯದಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಸಕಲೇಶಪುರ ವಿಭಾಗಾಧಿಕಾರಿ ಕಚೇರಿಯ ಎದುರು ಮತಪ್ರದರ್ಶನ ನಡೆಸಲಾಯಿತು. ಸುಮಾರು 200 ಜನರುಪಾಲ್ಗೊಂಡಿದ್ದ ಮೆರವಣಿಗೆಯು ಉಪವಿಭಾಗಾಧಿಕಾರಿ ಕಚೇರಿಗೆ ಆಗಮಿಸಿತು. ಅಲ್ಲಿ ಅವರ ಮೂಲಕ ಮುಖ್ಯ ಮಂತ್ರಿಗೆ ಮನವಿ ಸಲ್ಲಿಸಲಾಯಿತು. ಮೆರವಣಿಗೆ, ಮತಪ್ರದರ್ಶನದ ನಾಯಕತ್ವವನ್ನು ಕಾಂ| ವಿ. ಸುಕುಮಾರ್, ದೂಜ ಮತ್ತು ಕಾಂ| ಪಾಲ್‌ಡಿಸೋಜ ವಹಿಸಿದ್ದರು.

ನಂತರ ರೋಟರಿ ಪ್ರಾಥಮಿಕ ಶಾಲೆಯ ಮುಂದೆ ನಡೆದ ಸಭೆಯನ್ನುದ್ದೇಶಿಸಿ ಕಾಂ| ವಿ. ಸುಕುಮಾರ್ ಮಾತನಾಡಿದರು.

ಹರಿಹರ :

ಅ. 18 ರಂದು ಹರಿಹರದಲ್ಲಿಯೂ ಬಹಿರಂಗ ಸಭೆ ನಡೆದಿರುವದಾಗಿ ವರದಿ ಬಂದಿದೆ. ಸಭೆಯನ್ನುದ್ದೇಶಿಸಿ ಕಾಂ| ವಿ. ಜಿ. ಕೆ. ನಾಯರ್, ಕಿರ್ಲೋಸ್ಕರ್ ಕಾರ್ಮಿಕ ಸಂಘದ ಮುಖಂಡರಾದ ಕಾಂ| ಅಂಗಡಿ ಮತ್ತು ನಾರಾಯಣ ಸ್ವಾಮಿ ಅವರುಗಳು ಮಾತನಾಡಿ ಕೊಲೆಪಾತಕಿಗಳನ್ನು ಶಿಕ್ಷಿಸಬೇಕೆಂದು ಒತ್ತಾಯಿಸಿದರು.

○

ಹೈಕೋರ್ಟ್ ತೀರ್ಪಿನಿಂದಾಗಿ :

ಕನಿಷ್ಠ ವೇತನಕ್ಕೆ ಸಂಬಂಧಿಸಿದ ಸರಕಾರದ ಆಜ್ಞೆ ರದ್ದು

ಬೇರೆ ಬೇರೆ ಕೈಗಾರಿಕೆಗಳಿಗೆ ಸಂಬಂಧಿಸಿ ಸರಕಾರ ಹೊರಡಿಸಿದ ಕನಿಷ್ಟ ವೇತನ ಕುರಿತಾದ ಆಜ್ಞೆಯೊಂದನ್ನು ಹೈಕೋರ್ಟು ತಳ್ಳಿ ಹಾಕಿದೆ. ಇದರಿಂದಾಗಿ ವಿವಿಧ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 10 ಲಕ್ಷ ಕಾರ್ಮಿಕರಿಗೆ ತೊಂದರೆಯುಂಟಾಗಿದೆ.

ಸರಕಾರದ ಕಾರ್ಮಿಕ ಇಲಾಖೆ ಸರಿಯಾಗಿ ವರ್ತಿಸಿದ್ದರೆ ಈ ತೊಂದರೆಯುಂಟಾಗುತ್ತಿರಲಿಲ್ಲ. ಇದು ಕಾರ್ಮಿಕ ಸಚಿವರ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ.

ನಾವು, ಸರಕಾರ ಈ ಕೂಡಲೇ ಕ್ರಮವಹಿಸಿ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸಲು ಮುಂದಾಗಬೇಕೆಂದು ಒತ್ತಾಯಿಸುತ್ತೇವೆ.ಹಾಗೂ ಸರಕಾರದಮೇಲೆ ಒತ್ತಡ ತರಲು ಕಾರ್ಮಿಕರು ಹೋರಾಟಕ್ಕೆ ಸಿದ್ಧರಾಗುವಂತೆ ಮನವಿ ಮಾಡುತ್ತೇವೆ.

●

ಮಂಗಳೂರಿನಲ್ಲಿ ಇಸ್ಕಸ್ ಸಮ್ಮೇಳನ

ಬೆಂಗಳೂರು—18 : ಭಾರತ ಸೋವಿಯತ್ ಸಾಂಸ್ಕೃತಿಕ ಸಂಘ (ಇಸ್ಕಸ್) ದ ರಾಷ್ಟ್ರೀಯ ಸಮ್ಮೇಳನವು ಬಿಹಾರ್ ರಾಜ್ಯದ ಗಯಾದಲ್ಲಿ ನಡೆಯಲಿದೆ. ಈ ಸಮ್ಮೇಳನದ ಪೂರಕವಾಗಿ ಅಕ್ಟೋಬರ್ 24, 25 ರಂದು ಮಂಗಳೂರಿನಲ್ಲಿ ರಾಜ್ಯ ಸಮ್ಮೇಳನವು ನಡೆಯಲಿದೆ.

ಸಮ್ಮೇಳನವನ್ನು 24ರ ಸಂಜೆ ಪ್ರೊ. ಹಿರೇನ್ ಮುಖರ್ಜಿಯವರು ಉದ್ಘಾಟಿಸಲಿದ್ದಾರೆ. ಸಮ್ಮೇಳನದಲ್ಲಿ ಸುಮಾರು 200 ಮಿಕ್ಕಿ ಪ್ರತಿನಿಧಿಗಳು ಭಾಗವಹಿಸಲಿದ್ದಾರೆಂದು ಇಸ್ಕಸ್‌ನ ಕರ್ನಾಟಕ ರಾಜ್ಯ ಮಂಡಲಿಯ ಪರವಾಗಿ ಕಾಂ| ಜಿ. ರಾಮಕೃಷ್ಣ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

○

ಶಿರ್ಸಿ :

ಬಹಿರಂಗ ಸಭೆ

20-9-82 ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಸೂಚಿತ ಕರಾಕರಣಿಯನ್ನು ರದ್ದುಗೊಳಿಸಿ ಮನೆ ತೆರಿಗೆಯನ್ನು ಶಾಸ್ತ್ರೀಯವಾಗಿ ಆಕರಣಿ ಮಾಡುವಂತೆ ಒತ್ತಾಯಿಸಿ ಇಲ್ಲಿಯ ಬಿಡ್ಕಿ ಬೈಲಿನಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ| ಎಂ. ಎಸ್. ಧಾರೇಶ್ವರ ವಹಿಸಿದ್ದರು.

ನವೆಂಬರ್ ತಿಂಗಳಿನಲ್ಲಿ ಶಿರ್ಸಿ ಪುರಸಭೆಯ ಮನೆ ಕರಾಕರಣಿಯನ್ನು ವಿರೋಧಿಸಿ ಆಂದೋಲನ ನಡೆಸುವ ತೀರ್ಮಾನ ಕೈಗೊಳ್ಳಲಾಯಿತು. ಕೂಡಲೇ ಹೊಸ ಅಸೆಸ್‌ಮೆಂಟ್ ಅಧಿಕಾರಿಯನ್ನು ನೇಮಿಸಬೇಕೆಂದು ಒತ್ತಾಯಿಸಲಾಯಿತು. ರೈತ ಮುಖಂಡ ಬಂಗಾರೇಶ್ವರಗೌಡ ಅವರು ಮಾತನಾಡಿ ನಾಗರೀಕರ ಬೇಡಿಕೆಗೆ ಬೆಂಬಲ ವ್ಯಕ್ತಪಡಿಸಿದರು.

ಕಾಂ|| ಪರಶುರಾಮ ಮಸಾಲ್ದಿಯವರು ಮಾತನಾಡಿ, ಡಿವಿಜನಲ್ ಕಮೀಷನರಿಗೆ, ಪುರಸಭೆ ಕಾಲಂ 322 ರನ್ವಯ ಸಲ್ಲಿಸಲಿರುವ ಅರ್ಜಿಗಳಿಗೆ ನಗರದ ಎಲ್ಲ ವಾರ್ಡುಗಳ ನಾಗರೀಕರು ಹಸ್ತಾಕ್ಷರ ಮಾಡಿ ಸಹಕರಿಸುವಂತೆ ಕೋರಿದರು.

○

ಸ್ಥಾಪನಾ ಸಮ್ಮೇಳನ

(1ನೇ ಪುಟದಿಂದ)

ಗಳಿಗಾಗಿ, ಕರಾಳ ಶಾಸನಗಳ ವಿರುದ್ಧ ಐಕ್ಯ ಹೋರಾಟ ನಡೆಸಲು ರೂಪುಗೊಂಡ ರಾಷ್ಟ್ರೀಯ ಆಂದೋಲನ ಸಮಿತಿ (NCC)ಗೆ ಸಂಯೋಜನವಾಗಲು ಬಿ.ಇ.ಎಫ್.ಐ.ನ ಈ ಸಮ್ಮೇಳನ ನಿರ್ಣಯ ಸ್ವೀಕರಿಸಿದ್ದು ಅತ್ಯಂತ ಗಮನಾರ್ಹ.

ಸಮ್ಮೇಳನವು ಕಾಂ| ನರೇಶ್‌ಪಾಲ್ ಅವರನ್ನು ಅಧ್ಯಕ್ಷರನ್ನಾಗಿ, ಕಾಂ| ಅಸಿತ್‌ಸೇನ್ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಚುನಾಯಿಸಿತು. ಕಾಂ| ನರೇಶ್ ಪಾಲ್ ಅವರು 40ರ ದಶಕದಿಂದಲೇ ಬ್ಯಾಂಕ್ ನೌಕರರ ಮಧ್ಯೆ ಕೆಲಸ ಮಾಡಿಕೊಂಡು ಬಂದಿದ್ದಾರೆ. ಕಾಂ| ಅಸಿತ್‌ಸೇನ್ ಅವರು ಅಖಿಲ ಭಾರತ ರಿಸರ್ವ್ ಬ್ಯಾಂಕ್ ನೌಕರರ ಸಂಘಟನೆಯ ಹಾಗೂ ಗ್ರಾಮೀಣ ಬ್ಯಾಂಕ್‌ಗಳ ರಾಷ್ಟ್ರೀಯ ಫೆಡರೇಶನ್‌ಗೆ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.

ಈ ಸಂಘಟನೆಗೆ ಸಧ್ಯ ಬ್ಯಾಂಕ್ ನೌಕರರ ನಾಲ್ಕು ಅಖಿಲ ಭಾರತ ಫೆಡರೇಷನ್‌ಗಳು, 9 ರಾಜ್ಯ ಫೆಡರೇಷನ್‌ಗಳು ಸಂಯೋಜಿತಗೊಂಡಿವೆ.

ಬ್ಯಾಂಕ್ ನೌಕರರ ಸಮಸ್ಯೆಗಳ ಪರಿಹಾರಕ್ಕೆ, ದೇಶದ ಕಾರ್ಮಿಕ ಚಳುವಳಿ ಅವಿಭಾಜ್ಯ ಅಂಗವಾಗಲು ಕಂಕಣ ತೊಟ್ಟಿರುವ "ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ ಆಫ್ ಇಂಡಿಯಾ" ಸಂಘಟನೆಗೆ ನಾವು ಈ ಸಂದರ್ಭದಲ್ಲಿ ಹೃತ್ಪೂರ್ವಕ ಶುಭಾಶಯ ಸಲ್ಲಿಸುತ್ತೇವೆ. ಸಮರಶೀಲ ಸಂಘಟನೆಯಾಗಿ ಬೆಳೆಯಲೆಂದು ಹಾರೈಸುತ್ತೇವೆ.

ಅಥಣಿ ಎಸ್.ಎಫ್.ಐ. ಘಟಕದ ಆಶ್ರಯದಲ್ಲಿ ವಿಜೇತ ಈಜು ಪಟುಗಳಿಗೆ ಸತ್ಕಾರ

ಇತ್ತೀಚಿಗೆ ಹುಬ್ಬಳ್ಳಿಯಲ್ಲಿ ಜರುಗಿದ ಕರ್ನಾಟಕ ವಿಶ್ವವಿದ್ಯಾನಿಲಯ ಅಂತರ ಕಾಲೇಜು ಈಜುಗಾರಿಕೆ ಕೂಟದಲ್ಲಿ ಅಥಣಿಯ (ಬೆಳಗಾಂ ಜಿಲ್ಲೆ) ಶ್ರೀ ಶಿವಯೋಗಿ ಮುರುಘರಾಜೇಂದ್ರ ಕಾಲೇಜಿನ ವಿಜೇತ ವಿದ್ಯಾರ್ಥಿಗಳಿಗೆ ಸ್ಥಳೀಯ ಎಸ್. ಎಫ್. ಐ. ಘಟಕದ ಆಶ್ರಯದಲ್ಲಿ ಸತ್ಕರಿಸಲಾಯಿತು.

ಕಾಲೇಜಿಗೆ ಪ್ರಥಮ ಸ್ಥಾನ ತಂದುಕೊಟ್ಟ ಮತ್ತು ವೈಯುಕ್ತಿಕವಾಗಿಯೂ ಹಲವಾರು ಪ್ರಶಸ್ತಿಗಳಿಸಿದ ವಿದ್ಯಾರ್ಥಿಗಳು : ಶೀನಪ್ಪಗೋಳ, ಬಳೋಲ, ಹಿರೇಮಠ, ಲಾಲಸಿಂಗಿ, ಮುಗದುಮ್ ಹುಣಶ್ಯಾಳ ಇವರುಗಳು.

ಆತ್ಮೀಯವಾಗಿ ನಡೆದ ಈ ಸಮಾರಂಭದ ಅಧ್ಯಕ್ಷತೆಯನ್ನು ಕಾಂ| ಸುಧೀಂದ್ರ ಕುಲಕರ್ಣಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಾಧ್ಯಾಪಕ ಶ್ರೀ ಕೆ. ಟಿ. ಫಡಕೆ ಆಗಮಿಸಿದ್ದರು.

ಸನಿಹದಲ್ಲೇ ನಾಗಪುರದಲ್ಲಿ ನಡೆಯಲಿರುವ ಅಂತರ ವಿಶ್ವವಿದ್ಯಾನಿಲಯ ಈಜುಗಾರಿಕೆ ಕೂಟದಲ್ಲಿ ಭಾಗವಹಿಸಲು ತೆರಳಲಿರುವ ಶ್ರೀ ಶೀನಪ್ಪಗೋಳ ಹಾಗೂ ಶ್ರೀ ಬಳೋಲ ಅವರಿಗೆ ಶುಭ ಕೋರಲಾಯಿತು.

ಈ ವಿಜೇತ ವಿದ್ಯಾರ್ಥಿಗಳು ಎಸ್. ಎಫ್. ಐ. ಸದಸ್ಯರಾಗಿದ್ದಾರೆ.

ವರದಿ : ಮಲ್ಲಪ್ಪ ಹುಣಸೀಮೋರಿ ಅಥಣಿ.

ಬೆಂಗಳೂರು :

ಹೋಟೆಲ್ ಕಾರ್ಮಿಕರ ಸಭೆ

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘ (ಸಿ.ಐ.ಟಿ.ಯು.)ದ ಆಶ್ರಯದಲ್ಲಿ 20-10-82 ರಂದು ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿರುವ 'ಹೋಟೆಲ್ ರಿವೋಲಿ' ಎದುರು ಬಹಿರಂಗ ಸಭೆ ನಡೆಯಿತು.

23 ಜನ ಕಾರ್ಮಿಕರನ್ನು ವಿನಾ ಕಾರಣ ಕೆಲಸದಿಂದ ವಜಾ ಮಾಡಿರುವುದರ ವಿರುದ್ಧ ಹೋಟೆಲ್ ರಿವೋಲಿ ಕಾರ್ಮಿಕರು ಕಳೆದ ಆಗಸ್ಟ್ ತಿಂಗಳಿಂದ ಮುಷ್ಕರದಲ್ಲಿದ್ದಾರೆ. ಮಾಲೀಕರನ್ನು ಬೆಂಬಲಿಸುತ್ತಿರುವ ಪೋಲಿಸರ ಅಪಾರ ಕಿರುಕುಳ ಎದುರಿಸಿಯೂ ಹೋರಾಟ ಮುಂದುವರೆದಿದೆ. ಹೋಟೆಲ್ ಎದುರು ಸತ್ಯಾಗ್ರಹ ನಡೆಸಲು, ಘೋಷಣೆ ಕೂಗಲು 'ನಿಜಾಮುದ್ದೀನ್‌ನ ಬಂಟರು' ಬಿಡುತ್ತಿಲ್ಲ. ಈ ಬಹಿರಂಗ ಸಭೆಗೂ ಮೊದಲು ಅನುಮತಿ ದೊರೆತಿರಲಿಲ್ಲ.

ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷ ಕಾಂ| ಎ.ಆರ್.ಅಡವೀಶ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಾಂ| ಸೂರ್ಯನಾರಾಯಣರಾವ್ ಆಗಮಿಸಿದ್ದರು. ಹೋಟೆಲ್ ಮಾಲೀಕರ ಕಾರ್ಮಿಕ ವಿರೋಧಿ ನೀತಿಯನ್ನು, ಸರಕಾರದ ಕುಮ್ಮಕ್ಕನ್ನು ತೀವ್ರವಾಗಿ ಖಂಡಿಸಿದ ಕಾಂ| ಸೂರಿಯವರು ಹೋರಾಟದ ನಿಧಿಗೆ ಸಿ. ಐ. ಟಿ. ಯು. ಪರವಾಗಿ 50ರೂ. ನೀಡಿದರು. ಸಿ.ಐ.ಟಿ.ಯು. ಸಂಘಗಳ ಪ್ರತಿನಿಧಿಗಳ ಸಭೆಯಲ್ಲಿ ಭಾಗವಹಿಸಿದ್ದು ಸಹಾಯದ ವಾಗ್ದಾನ ನೀಡಿದರು. ಸಭೆಯಲ್ಲಿ ಸುಮಾರು 180 ರೂ. ಸಂಗ್ರಹವಾಯಿತು.

ಸಭೆಯನ್ನುದ್ದೇಶಿಸಿ ವೈಕೋಡ ಕಾಂ| ರಾಮಯ್ಯ ಮತ್ತು ಸಿ.ಐ.ಟಿ.ಯು. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ|| ಜಾನ್ ವಿನ್ಸೆಂಟ್ ಮಾತನಾಡಿ ಹೋರಾಟವನ್ನು ಬೆಂಬಲಿಸಿದರು.

○

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154, Prited at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.